# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2012

ಬೆಲೆ ರೂ.2.50
WPP No. SK/MNG/WPP/69

II ಧಿಯೋ ಯೋನಃ ಪ್ರಚೋದಯಾತ್ II

D.O.P - 15th of every month from Udupi Sorting Office

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-12 ಸಂಚಿಕೆ-4 ಪುಟಗಳು-10 Registered Under No.J/UDP/1260/2012-2014 Dated from 01-01-2012 to 31-12-2014.

ಕುಂಜಿಬೆಟ್ಟು ಉಡುಪಿ : ಎಸ್.ಎಸ್.ಎಲ್.ಸಿ. ತರಬೇತಿ ಶಿಬಿರ -ಪ್ರಭಾಕರ ಭಂಡಿ ಪುಟ-4



ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ ಡಾ। ಎಚ್.ವಿ.ನರಸಿಂಹಮೂರ್ತಿ ಪುಟ-6



ಶ್ರದ್ಧಾಂಜಲಿ-ಕವನ : ಅಪ್ಪ ನೀನಿಲ್ಲದಿಲ್ಲ -ಡಾ। ಅಪರ್ಣ ಸುರೇಂದ್ರ, ಮೈಸೂರು ಪುಟ-6

ಅಗ್ರ ಪಂಕ್ತಿಯಲ್ಲಿ ಸ್ಥಾನಿಕ ಬ್ರಾಹ್ಮಣರು -ಸಿ.ಎಸ್.ರಾವ್ ಪುಟ-7

## ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿಷ್ಠಾ ಮಹೋತ್ಸವ ಆಚರಣೆ

ಮೀನ ಸಂಕ್ರಮಣ ದಿನ ತಾ.14-3-12ನೇ ಬುಧವಾರದಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ದೇವಸ್ಥಾನದಲ್ಲಿ ಪ್ರತಿಷ್ಠಾ ಮಹೋತವವು ನೆರವೇರಿತು.

ಬ್ರಹ್ಮಶ್ರೀ ಪಾವಂಜೆ ಶ್ರೀ ವಾಸುದೇವ ಉಪಾಧ್ಯಾಯರ ನೇತೃತ್ವದಲ್ಲಿ ಬೆಳಿಗ್ಗೆ 8 ಗಂಟೆ ಯಿಂದಲೇ ಗಣಹೋಮ, ರುದ್ರಾಭಿಷೇಕ, ಶ್ರೀ ಚಕ್ರ ಪೂಜೆ, ರುದ್ರಪಠಣ, ಇತ್ಯಾದಿ ಧಾರ್ಮಿಕ ವಿಧಿಗಳು ಪ್ರಾರಂಭಗೊಂಡವು. ಸಮಾಜದ ಮಹಿಳೆಯರಿಂದ ಭಜನೆ, ಲಲಿತಾ ಸಹಸ್ರನಾಮ ಪಾರಾಯಣದ ಬಳಿಕ ಮಧ್ಯಾಹ್ನ 1 ಗಂಟೆಗೆ ಮಹಾಪೂಜೆ, ಬ್ರಾಹ್ಮಣ ಸುಹಾಸಿನಿ ಆರಾಧನೆ ನಡೆದು ಪ್ರಸಾದ ವಿತರಿಸಲಾಯಿತು.

ಮೆಚ್ಚುಗೆ ವ್ಯಕ್ತಪಡಿಸಿದರು. ಪುಸಕವನ್ನು ಬಿಡುಗಡೆ ಮಾಡುತ್ತಾ ಸಂಘದ ಕಾರ್ಯದರ್ಶಿಯವರಾದ ಶ್ರೀ ಬಿ. ಕೃಷ್ಣಮೂರ್ತಿರಾಯರು ವಿಳಾಸ ಪುಸ್ತಕದ ಅವಶ್ಯಕತೆ ಬಗ್ಗೆ ಒತ್ತು ನೀಡಿ, ಮುಂದಿನ ಸಂಚಿಕೆಯಲ್ಲಿ ಇನ್ನೂ ಹೆಚ್ಚಿನ ಮಾಹಿತಿಗಳು ಮೂಡಿಬರಲಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಸಿ.ಎಸ್.ರಾಯರು, ಮುಂದೆ ವಿಳಾಸ ಪುಸ್ತಕವನ್ನು ಇನ್ನೂ ಉತ್ತಮ ರೀತಿಯಲ್ಲಿ ಪರಿಷ್ಕರಿಸಿ ಹೆಚ್ಚಿನ ಮಾಹಿತಿಗಳೊಂದಿಗೆ ಪ್ರಕಟಿಸುವುದಾಗಿ ಭರವಸೆ ನೀಡಿದರು.

ಪ್ರತಿಷ್ಠಾ ಮಹೋತ್ಸವ ದಿವಸದಂದು ಮಾರ್ಚ್ ತಿಂಗಳ ಶ್ರೀಶಾರದಾ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯಕ್ರಮವೂ



ಅದೇ ದಿನ ಮಧ್ಯಾಹ್ನ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರಿಂದ ಪರಿಷ್ಕರಿಸಿ ಮುದ್ರಿಸಲ್ಪಟ್ಟ ಉಡುಪಿ ತಾಲೂಕು ನಮ್ಮ ಸಮಾಜ ಬಾಂಧವರ ವಿಳಾಸ ಪುಸ್ತಕ ''ನಮ್ಮವರು'' ಇದರ ಬಿಡುಗಡೆ ಸಮಾರಂಭ ನೆರವೇರಿತು. ಸಂಘದ ಕೋಶಾಧಿಕಾರಿಗಳಾದ ಡಾ। ವೈ.ಸುದರ್ಶನ ರಾಯರು ಪ್ರಾಸ್ತಾವಿಕವಾಗಿ ಮಾತನಾಡಿ ಕಡಿಮೆ ಅವಧಿಯಲ್ಲಿ ಮಾಡಿದ ಸಿ.ಎಸ್.ರಾಯರ ಈ ಸಾಧನೆಗೆ

ಇದ್ದುದರಿಂದ ಸಮಾಜ ಬಾಂಧವರು ಬೆಳಗ್ಗಿನಿಂದಲೇ ಪತ್ರಿಕೆಯನ್ನು ಮಡಚುವ ಕಾಯಕದಲ್ಲಿ ತೊಡಗಿದ್ದು, ಮಧ್ಯಾಹ್ನದ ಹೊತ್ತಿಗೆ ಆ ಕೆಲಸವೂ ಮುಗಿದಿತ್ತು.

ಪ್ರತೀ ವರ್ಷದಂತೆ ಈ ಬಾರಿಯೂ ಪ್ರತಿಷ್ಠಾ ಮಹೋತ್ಸವದಲ್ಲಿ ಅಧಿಕ ಸಂಖ್ಯೆಯಲ್ಲಿ ಸಮಾಜ ಬಾಂಧವರು ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾದರು.

-ಎಚ್.ಎನ್.ಶ್ಯಾನುಭಾಗ್

## ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ಶ್ರೀ ದುರ್ಗಾನಮಸ್ಕಾರ ಪೂಜೆ

ಪ್ರತಿವರ್ಷದಂತೆ ನಡೆಯುವ ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯು ಈ ಬಾರಿ ತಾ.8-4-2012ನೇ ಆದಿತ್ಯವಾರ ಶ್ರೀಶಾರದಾ ಮಂಟಪದಲ್ಲಿ ಸಂಪನ್ನಗೊಂಡಿತು. ಸಂಜೆ ಗಂಟೆ 5-00ರಿಂದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಗಳ ಮತ್ತು ಕಿಗ್ಗ ನಾಗಭೂಷಣ ಶಾಸ್ತ್ರಿಗಳ ನೇತೃತ್ವದಲ್ಲಿ ದೀಪವಿಟ್ಟು, ಮಂಡಲ ರಚಿಸಿ ಪೂಜೆಯ ಶುಭಾರಂಭವಾಯಿತು. ಕರ್ತೃಗಳಾಗಿ ಸಂಘದ ಅಧ್ಯಕ್ಷ ಶ್ರೀ ಸಿ.ಎಸ್.ರಾವ್ ದಂಪತಿಗಳು ಸಹಕರಿಸಿದರು. ನಮ್ಮ ಸಮಾಜ ಸ್ವಾಧ್ಯಾಯ ತಂಡದವರಿಂದ ದುರ್ಗಾ ಸಪ್ತಶತೀ ಪಾರಾಯಣ ನಡೆಯಿತು. ಶ್ರೀಶಾರದಾ ದೇವಸ್ಥಾನದಲ್ಲಿ ಮಹಿಳೆಯರಿಂದ ಸಾಮೂಹಿಕ ಭಜನೆ, ಲಲಿತಾ ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ ನಡೆದವು.

ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ ಮುಗಿದು ರಾತ್ರಿ 8-00 ಗಂಟೆಗೆ ಮಹಾಪೂಜೆ ನೆರವೇರಿತು. ತೀರ್ಥ ಪ್ರಸಾದ ವಿತರಣೆ ಬಳಿಕ ಭೋಜನ ಪ್ರಸಾದ ನಡೆಯಿತು. ಈ ಸಾಮೂಹಿಕ ಪೂಜಾ ಕಾರ್ಯಕ್ರಮದಲ್ಲಿ ಸುಮಾರು 150 ಜನ ಸಮಾಜ ಬಾಂಧವರು ಹಾಗೂ ಪರಿಸರದ ಭಕ್ತ ಬಾಂಧವರು ಪಾಲ್ಗೊಂಡು ಸೇವೆಯ ಧನ್ಯತೆಯನ್ನು ಪಡೆದರು.

## ಸೌರಮಾನ ಯುಗಾದಿಯ ಶುಭಾಶಯಗಳು

ನಮ್ಮ ಮೆಚ್ಚಿನ ಶ್ರೀಶಾರದಾ ಮಾಸ ಪತ್ರಿಕೆಯ ಆರಂಭದ ದಿನಗಳಿಂದಲೂ ಪತ್ರಿಕೆಯ ಬೆಳವಣಿಗೆಗೆ ಮತ್ತು ಯಶಸ್ಸಿಗೆ ಅಪಾರ ಕೊಡುಗೆಯನ್ನಿತ್ತ ಎಲ್ಲಾ ಆತ್ಮೀಯ ಸಮಾಜಬಾಂಧವರಿಗೆ, ಶ್ರೀಶಾರದಾ ವೇದಿಕೆಯ ಮಹಾಪೋಷಕರು, ಪೋಷಕರು, ದಾನಿಗಳು ಮತ್ತು ಆಜೀವ ಸದಸ್ಯರಿಗೆ, ಆಡಳಿತ ಮಂಡಳಿ ನಿರ್ದೇಶಕರಿಗೆ, ಯುವವೇದಿಕೆ, ಮಹಿಳಾ ವೇದಿಕೆ ಮತ್ತು ಇತರ ಎಲ್ಲಾ ವೇದಿಕೆಗಳ ಪದಾಧಿಕಾರಿಗಳು ಮತ್ತು ಸದಸ್ಯರಿಗೆ, ಜಾಹೀರಾತು ನೀಡಿದ ಮಹನೀಯರಿಗೆ, ಹಿರಿಯ, ಕಿರಿಯ ಸಾಹಿತಿಗಳಿಗೆ ಮತ್ತು ಲೇಖಕಮಿತ್ರರಿಗೆ, ಛಾಯಾಗ್ರಾಹಕರಿಗೆ, ಪತ್ರಿಕೆಗೆ ಆಕರ್ಷಕ ವಿನ್ಯಾಸ ಮೂಡಿಸಿ ಅಂದವಾಗಿ ಮುದ್ರಿಸುತ್ತಿರುವ ಶ್ರೀನಿಧಿ ಕಂಪ್ಯೂಟರ್ ಗ್ರಾಫಿಕ್ಸ್ ಮತ್ತು ಅಗ್ರಹಾರ ಆಫ್‌ಸೆಟ್ಸ್ ಇವರಿಗೆ, ಪ್ರತಿ ತಿಂಗಳೂ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಹಕರಿಸಿದ ಮತ್ತು ಪ್ರಾಯೋಜಕತ್ವವನ್ನು ನೀಡಿದ ಪತ್ರಿಕೆಯ ಅಭಿಮಾನಿಗಳಿಗೆ ಮತ್ತು ಪ್ರೀತಿಯ ಓದುಗರಿಗೆ ಅನಂತ ಕೃತಜ್ಞತೆಗಳು.

ಮತ್ತೆ ಯುಗಾದಿ ಮರಳಿ ಬಂದಿದೆ. ನಮ್ಮ ಎಲ್ಲಾ ಸಮಾಜಬಾಂಧವರಿಗೆ ''ಸೌರಮಾನ ಯುಗಾದಿ'' ಸುಖ, ಶಾಂತಿ, ನೆಮ್ಮದಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೇವೆ.

-ಸಂಪಾದಕ ಮಂಡಳಿ



## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ)

ಕುಂಜಿಬೆಟ್ಟು, ಉಡುಪಿ - 2.

ನಮ್ಮ ಸಂಘದ ಆಶ್ರಯದಲ್ಲಿ ಶ್ರೀ ಶಂಕರ ಜಯಂತಿ ಪ್ರಯುಕ್ತ ತಾ.29-04-2012 ಆದಿತ್ಯವಾರ **ಸಾಮೂಹಿಕ ಉಪನಯನ** ನೆರವೇರಲಿದೆ ಹಾಗೂ ಶ್ರೀಶಾರದಾ ಮಂದಿರದಲ್ಲಿ ವಿಶೇಷ ಪೂಜೆಯೂ ಜರಗಲಿದೆ. ಅದೇ ದಿನ ಸಂಜೆ **4-00 ಗಂಟೆಗೆ ಶ್ರೀ ಶಂಕರ ತತ್ವ ಆಧಾರಿತ ಪ್ರವಚನ, ಸೌಂದರ್ಯಲಹರಿ ಸ್ಪರ್ಧೆ, ರಂಗೋಲಿ ಸ್ಪರ್ಧೆ** ಜ್ಞಾನಭಾರತಿಯ ಸಹಯೋಗದೊಂದಿಗೆ ಜರಗಲಿದೆ.

ಸರ್ವರಿಗೂ ಆದರದ ಸ್ವಾಗತ :

(ವಿವರಗಳು 9ನೇ ಪುಟದಲ್ಲಿ)

- ಕಾರ್ಯದರ್ಶಿ

ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.20-04-2012ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್‌ರಿಗೆ ತಿಳಿಸಲು ವಿನಂತಿಸಲಾಗಿದೆ.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಕುಂಜಿಬೆಟ್ಟು, ಉಡುಪಿ ಮತ್ತು ಶ್ರೀ ಶಂಕರ ಸೇವಾ ವೇದಿಕೆ, ಉಡುಪಿ ಇವರು

ಶ್ರೀ ಶಂಕರ ಜಯಂತಿಯ ಶುಭ ಸಂದರ್ಭದಲ್ಲಿ ಅರ್ಪಿಸುವ



### ದಾಸ ಸಾಹಿತ್ಯ ಸಂಗೀತ ರಸಮಂಜರಿ

ಪ್ರಸ್ತುತಿ : ಶ್ರೀ ರಾಮಕೃಷ್ಣ ಕಾಟುಕುಕ್ಕೆ ಮತ್ತು ಬಳಗ

ಹಾಡುಗಳ ಹಿನ್ನೆಲೆ ವಿಶ್ಲೇಷಣೆ : ವಿದ್ವಾನ್ ಶ್ರೀ ಬಿ. ಗೋಪಾಲಾಚಾರ್ಯ

ಕೀಬೋರ್ಡ್‌ನಲ್ಲಿ ಸಹಕಾರ : ಶ್ರೀ ಬಿ.ಪ್ರಕಾಶ್ ರಾವ್

**ದಿನಾಂಕ : 29-04-2012, ಸ್ಥಳ : ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ**

**ಸಮಯ : ಸಂಜೆ ಗಂಟೆ 6-00ರಿಂದ 8-30**

ದಾಸ ಸಾಹಿತ್ಯ ಪ್ರೇಮಿಗಳೆಲ್ಲರಿಗೆ ಹೃತ್ಪೂರ್ವಕ ಸ್ವಾಗತ

ಪ್ರವೇಶ : ಉಚಿತ

**ಪ್ರಾಯೋಜಕರು : ಶ್ರೀಮತಿ ಮತ್ತು ಶ್ರೀ ಬಿ.ಜಯರಾಮ್ ರಾವ್**

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

ಸಮಾಜ ಬಾಂಧವರು ಯಾವುದೇ ಲೇಖನ, ಸುದ್ದಿ, ವರದಿ, ಇತ್ಯಾದಿಗಳನ್ನು ಕಳುಹಿಸುವಾಗ ತಮ್ಮ ಹೆಸರು ಮತ್ತು ವಿಳಾಸವನ್ನು ನಮೂದಿಸಿ ಸಹಕರಿಸಬೇಕಾಗಿ ವಿನಂತಿ.

-ಸಂಪಾದಕ ಮಂಡಳಿ

## ಸುಭಾಷಿತ-ನೀತಿಶಾಸ್ತ್ರ

*ಮರ್ಕಟಸ್ಯಂ ಸುರಾಪಾನಂ ಮಧ್ಯೇ*
*ವೃಶ್ಚಿಕದಂಶನಮ್ ।*
*ತನ್ಮಧ್ಯೇ ಭೂತಸಂಚಾರೋ ಯದ್ವಾತದ್ವಾ*
*ಭವಿಷ್ಯತಿ ॥*

ಹೇಳಿಕೇಳಿ ಅದು ಮಂಗ. ಅದಕ್ಕೆ ಹೆಂಡ ಕುಡಿಸಿದರು. ಅದೇ ವೇಳೆ ಚೇಳು ಕಚ್ಚಿತು. ಇಷ್ಟು ಸಾಲದು ಎಂಬಂತೆ ಮೈಯೊಳಗೆ ಭೂತವೂ ಸೇರಿಕೊಂಡಿತು. ಇನ್ನೇನು, ಮಹಾ ಅನರ್ಥವೇ ಸರಿ!

★★★★

*ಸ್ವಭಾವ ಸುಂದರಂ ವಸ್ತು ನ*
*ಸಂಸ್ಕಾರಮಪೇಕ್ಷತೇ ॥*
*ಮುಕ್ತಾರತ್ನಸ್ಯ ಶಾಣಾಶ್ಮಘರ್ಷಣಂ*
*ನೋಪಯುಜ್ಯತೇ ॥*

ಸಹಜವಾಗಿಯೇ ಸುಂದರವಾಗಿರುವ ವಸ್ತುವಿಗೆ ಅಲಂಕಾರವಾಗಲೀ, ಸಂಸ್ಕಾರವಾಗಲೀ ಬೇಕಿಲ್ಲ. ಮುತ್ತು ನಿಜವಾಗಿಯೂ ಸುಂದರವಾಗಿರುತ್ತದೆ. ಅದಕ್ಕೆ ಕಲ್ಲಿನಿಂದ ಜಜ್ಜಿ ರೂಪ ಕೊಡುವ ಅಗತ್ಯವಿರುವುದಿಲ್ಲ.

★★★★

*ಯತ್ರ ಸರ್ವೇಽಪಿ ನೇತಾರಃ ಸರ್ವೇ ಪಂಡಿತ*
*ಮಾನಿನಃ ।*
*ಸರ್ವೇ ಮಹತ್ವಮಿಚ್ಛಂತಿ ತತ್ರ ಕಾರ್ಯಂ*
*ವಿನಶ್ಯತಿ ।*

ಎಲ್ಲಿ ಎಲ್ಲರೂ ನಾಯಕರಾಗಲು ಇಚ್ಛಿಸುತ್ತಾರೋ, ಎಲ್ಲಿ ಎಲ್ಲರೂ ತನ್ನನ್ನೇ ಸರ್ವಜ್ಞನೆಂದು ತಿಳಿಯುತ್ತಾರೋ, ಎಲ್ಲಿ ಎಲ್ಲರೂ ತನಗೇ ಉನ್ನತ ಗೌರವ ಸಿಗಬೇಕೆಂದು ಆಶಿಸುತ್ತಾರೋ ಅಲ್ಲಿ ಕೆಲಸ ಕೆಡುವುದು ಖಂಡಿತ.

*ಸಂಗ್ರಹ : ಎಚ್.ಎನ್.ಶ್ಯಾನುಭಾಗ್*

# ಶ್ರೀ ಕೃಷ್ಣಾಯನ
## (ಶ್ರೀ ಮದ್ಭಾಗವತಾನುಸಾರಿ)



**- ಕೆ. ಆತ್ಮಾರಾಮ ಶಾಸ್ತ್ರೀ**
**ಬೆಂಗಳೂರು**

(ಹಿಂದಿನ ಸಂಚಿಕೆಯಿಂದ...)

ರಾಜ ಸಭೆಯಲ್ಲಿ ಪೌಂಡ್ರಕನ ಸಂದೇಶವನ್ನು ಕೇಳಿ ಉಗ್ರಸೇನಾದಿಗಳು ಜೋರಾಗಿ ನಕ್ಕು ಬಿಟ್ಟರು. ಎಲ್ಲರ ನಗು ನಿಂತ ಮೇಲೆ ಭಗವಂತನಾದ ಶ್ರೀಕೃಷ್ಣನು ದೂತನಿಗೆ ಹೇಳಿದನು, "ದೂತನೆ, ನೀನು ಹೋಗಿ ನಿನ್ನ ರಾಜನಿಗೆ ನನ್ನ ಸಂದೇಶವನ್ನು ತಿಳಿಸು. ಆ ಮೂರ್ಖನು ಯಾವ ಚಿಹ್ನೆಗಳನ್ನು ಹೆಸರಿಸಿದ್ದಾನೋ ಅವುಗಳನ್ನೇ ನಾನು ಅವನ ಮೇಲೆ ಪ್ರಯೋಗಿಸುತ್ತೇನೆ. ಅವನು ಹತನಾಗಿ ರಣಹದ್ದು, ಕಂಕ ಮೊದಲಾದ ಪಕ್ಷಿಗಳಿಗೂ, ನಾಯಿ, ತೋಳಗಳಿಗೂ ಆಹಾರವಾಗಿ ನೆಲದ ಮೇಲೆ ಮಲಗಿ ಬಿಡುತ್ತಾನೆ. ಅವನು ನನ್ನನ್ನು ರಕ್ಷಿಸುವ ಬದಲು ತನ್ನನ್ನೇ ರಕ್ಷಿಸಿಕೊಳ್ಳಲಿ". ದೂತನು ಕೃಷ್ಣನ ಸಂದೇಶವನ್ನು ಯಥಾವತ್ತಾಗಿ ಪೌಂಡ್ರಕನಿಗೆ ತಲುಪಿಸಿದನು. ಆ ವೇಷಧಾರಿ ವಾಸುದೇವನು ಹೆದರಿ ಕಂಗಾಲಾದನು. ಅವನು ತನ್ನ ಮಿತ್ರನಾದ ಕಾಶೀರಾಜನಲ್ಲಿಗೆ ಧಾವಿಸಿದನು. ಕಾಶೀರಾಜನು ಅವನಿಗೆ ಧೈರ್ಯಹೇಳಿ ಮೂರು ಅಕ್ಷೌಹಿಣಿ ಸೇನೆಯೊಂದಿಗೆ ಯುದ್ಧಕ್ಕೆ ಸಜ್ಜಾದನು. ಶ್ರೀಕೃಷ್ಣನು ಪೌಂಡ್ರಕನ ಪಲಾಯನವನ್ನೂ, ಕಾಶೀರಾಜನಲ್ಲಿ ಆಶ್ರಯ ಪಡೆದುದನ್ನೂ ತಿಳಿದು ಸೇನೆಯೊಂದಿಗೆ ಕಾಶಿಗೇ ಹೋದನು. ಅಲ್ಲಿ ಪೌಂಡ್ರಕನು ಎರಡು ಅಕ್ಷೌಹಿಣಿ ಸೈನ್ಯವನ್ನು ಕೂಡಿಸಿಕೊಂಡು ಶ್ರೀಕೃಷ್ಣನನ್ನು ಎದುರಿಸಲು ಬಂದನು. ಅವನೊಡನೆ ಕಾಶೀರಾಜನೂ ತನ್ನ ಸೇನೆಯೊಂದಿಗಿದ್ದನು. ಪೌಂಡ್ರಕನು ಶಂಖ, ಚಕ್ರ, ಖಡ್ಗ, ಗದಾ, ಪದ್ಮ, ಶಾರ್ಙ್ಗಧನಸ್ಸು, ಶ್ರೀವತ್ಸ ಮೊದಲಾದ ಚಿಹ್ನೆಗಳನ್ನೂ, ರೇಷ್ಮೆಯ ಪೀತಾಂಬರವನ್ನೂ, ಅಮೂಲ್ಯ ಆಭರಣಗಳನ್ನೂ ಧರಿಸಿದ್ದನು. ನಾಟಕದ ವೇಷಧಾರಿಯಂತಿದ್ದ ಅವನನ್ನು ನೋಡಿ ಶ್ರೀಕೃಷ್ಣನಿಗೆ ನಗು ತಡೆಯಲಾಗಲಿಲ್ಲ. ಚೆನ್ನಾಗಿ ನಕ್ಕು ಬಿಟ್ಟನು. ಆಗ ಶತ್ರುಗಳು ಭಗವಂತನ ಮೇಲೆ ವಿವಿಧ ಆಯುಧಗಳನ್ನು ಪ್ರಯೋಗಿಸಿದರು. ಜಗನ್ನಾಥನೂ ಅನೇಕ ಪ್ರಕಾರದ ಆಯುಧಗಳನ್ನು ಬಳಸಿ ಶತ್ರು ಸೈನ್ಯವನ್ನು ಧ್ವಂಸಗೊಳಿಸಿದನು. ಮತ್ತೆ ಪೌಂಡ್ರಕನಿಗೆಂದನು, "ಹುಂಬ ಪೌಂಡ್ರಕ, ನೀನು ದೂತನ ಮೂಲಕ ಹೇಳಿಕಳಿಸಿದಂತೆ ನಾನು ನನ್ನ ಚಿಹ್ನೆಗಳನ್ನು ತ್ಯಜಿಸಲು ಸಿದ್ಧನಿದ್ದೇನೆ. ಆದರೆ ನನಗೆ ನಿನ್ನೊಡನೆ ಯುದ್ಧ ಮಾಡಲು ಸಾಧ್ಯವಿಲ್ಲವೆಂದಾದಾಗ ಮಾತ್ರ. ಈಗ ಅದೇ ಆಯುಧಗಳನ್ನು ನಿನ್ನ ಮೇಲೆ ಪ್ರಯೋಗಿಸುವೆನು. ನಿನ್ನ ಸುಳ್ಳು ಹೆಸರನ್ನು ಅಳಿಸಿಬಿಡುತ್ತೇನೆ. ಇದಾಗದಿದ್ದರೆ ನಾನು ನಿನಗೆ ಶರಣಾಗುತ್ತೇನೆ". ಹೀಗೆಂದ ಜನಾರ್ದನನು ತೀಕ್ಷ್ಣವಾದ ಬಾಣಗಳಿಂದ ಪೌಂಡ್ರಕನ ರಥವನ್ನು ಮುರಿದು, ಚಕ್ರದಿಂದ ಅವನ ತಲೆಯನ್ನು ಮುಂಡದಿಂದ ಬೇರ್ಪಡಿಸಿದನು. ಹಾಗೇ ಕಾಶೀರಾಜನ ತಲೆಯನ್ನೂ ಕಡಿದನು. ಬಳಿಕ ದ್ವಾರಕಾಧೀಶನು ಸ್ವಪುರಕ್ಕೆ ಹಿಂತಿರುಗಿದನು. ಯಾವಾಗಲೂ ಕೃಷ್ಣವೇಷವನ್ನು ಧರಿಸಿ ತಾನೇ ಕೃಷ್ಣನೆಂದು ಭಾವಿಸಿಕೊಂಡಿದ್ದರಿಂದ ಪೌಂಡ್ರಕನ ಪಾಪಗಳೆಲ್ಲ ಕಳೆದುಹೋಗಿದ್ದವು. ಆದುದರಿಂದ ಸತ್ತ ಮೇಲೆ ಅವನಿಗೆ ಸಾರೂಪ್ಯಮುಕ್ತಿಯೇ ದೊರೆಯಿತು.

ಕಾಶೀರಾಜನ ತಲೆ ಅವನ ಅರಮನೆಯ ಮುಂದೆ ಬಿದ್ದಿತ್ತು. ಅದನ್ನು ಗುರುತಿಸಿದ ಅವನ ಸಂಬಂಧಿಕರು ಗೋಳಾಡಿದರು. ಅವನ ಮಗನಾದ ಸುದಕ್ಷಿಣನು ಅವನ ಔರ್ಧ್ವದೇಹಿಕ ಕ್ರಿಯೆಗಳನ್ನು ನೆರವೇರಿಸಿದನು. ತನ್ನ ತಂದೆಯ ವಧೆ ಮಾಡಿದವನನ್ನು ತಾನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿದನು. ಅದಕ್ಕಾಗಿ ಅವನು ಭಗವಂತನಾದ ಶಂಕರನನ್ನು ತನ್ನ ಪುರೋಹಿತನ ನೆರವಿನಿಂದ ಅನನ್ಯ ಶ್ರದ್ಧೆಯಿಂದ ಆರಾಧಿಸಿದನು. ಆಗ ಪರಶಿವನು ಪ್ರಸನ್ನನಾಗಿ ವರವನ್ನು ಕೊಡುವುದಾಗಿ ಹೇಳಿದನು. ಸುದಕ್ಷಿಣನು ಕೃಷ್ಣನನ್ನು ಕೊಲ್ಲುವ ಉಪಾಯವನ್ನು ತಿಳಿಸುವಂತೆ ಕೇಳಿಕೊಂಡನು. ಅಭಿಚಾರವಿಧಿಯಿಂದ ದಕ್ಷಿಣಾಗ್ನಿಯನ್ನು ಆರಾಧಿಸಲು ಹೇಳಿ ಶಂಕರನು ಅಂತರ್ಧಾನನಾದನು. ಅವನ ಬೋಧನೆಯಂತೆ ಸುದಕ್ಷಿಣನು ಅಭಿಚಾರವಿಧಿಯಿಂದ ದಕ್ಷಿಣಾಗ್ನಿಯನ್ನು ಅರ್ಚಿಸಿದನು. ಪೂರ್ಣಾಹುತಿಯಾಗುತ್ತಲೆ ದಕ್ಷಿಣಾಗ್ನಿಯು ಮೂರ್ತಿಮತ್ತಾಗಿ ಕಾಣಿಸಿಕೊಂಡಿತು. ಅದರ ತಲೆಕೂದಲು, ಗಡ್ಡ, ಮೀಸೆಗಳು ಕಾಸಿದ ತಾಮ್ರದಂತೆ ಕೆಂಪಗಿದ್ದವು. ಉಗ್ರವಾದ ಹುಬ್ಬು, ಕ್ರೂರಮುಖ, ದಾಡೆಗಳು ಅದಕ್ಕಿದ್ದವು. ಅದು ತನ್ನ ನಾಲಿಗೆಯಿಂದ ಕಟವಾಯಿಯನ್ನು ನೆಕ್ಕಿಕೊಳ್ಳುತ್ತಿತ್ತು. ಕೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡಿದ್ದ ಅದು ಬತ್ತಲಾಗಿತ್ತು. ತನ್ನ ಭೂತಗಣದೊಂದಿಗೆ ತನ್ನ ಹೆಜ್ಜೆಗಳಿಂದ ನೆಲವನ್ನು ನಡುಗಿಸುತ್ತ ದ್ವಾರಕೆಯತ್ತ ಧಾವಿಸಿತು. ಕಾಡ್ಗಿಚ್ಚನ್ನು ಕಂಡು ಬೆದರುವ ಜಿಂಕೆಗಳಂತೆ ದ್ವಾರಕಾವಾಸಿಗಳು ಅದನ್ನು ನೋಡಿ ಭೀತರಾದರು. ಅವರೆಲ್ಲ ಶ್ರೀಕೃಷ್ಣನಿಗೆ ಶರಣು ಹೋದರು. ಸಭೆಯಲ್ಲಿ ಪಗಡೆಯಾಡುತ್ತಿದ್ದ ಭಗವಂತನು ನಕ್ಕು, "ಹೆದರಬೇಡಿ" ಎಂದು ಅಭಯ ಹೇಳಿದನು. ಅದು ಮಾಹೇಶ್ವರ ಕೃತ್ಯವೆಂದು ಅರಿತ ವಾಸುದೇವನು ಬಳಿಯಲ್ಲಿದ್ದ ಚಕ್ರಕ್ಕೆ ಆದೇಶಿಸಿದನು. ಆ ಕೋಟಿ ಸೂರ್ಯಪ್ರಭೆಯ ಚಕ್ರವು ಆ ಅಭಿಚಾರಾಗ್ನಿಯ ಬಲವನ್ನು ನಾಶಮಾಡಿತು. ಆಗ ಆ ಅಗ್ನಿಯು ಮರಳಿ ಕಾಶಿಗೇ ಹೋಗಿ ಪುರೋಹಿತ ಸಹಿತನಾದ ಸುದಕ್ಷಿಣನನ್ನೇ ಸುಟ್ಟು ಹಾಕಿತು. ಸುದರ್ಶನ ಚಕ್ರವೂ ಅದನ್ನು ಹಿಂಬಾಲಿಸಿಕೊಂಡು ಹೋಗಿ ಇಡೀ ವಾರಣಾಸಿಯನ್ನೇ ಸುಟ್ಟು ಹಿಂದಕ್ಕೆ ಬಂದಿತು.

### ೨೧

ಜಾಂಬವತೀ-ಕೃಷ್ಣರ ಹಿರಿಯ ಮಗನೇ ಸಾಂಬ. ಅವನು ದುರ್ಯೋಧನನ ಮಗಳಾದ ಲಕ್ಷ್ಮಣೆಯ (ಲಕ್ಷಣೆಯೆಂದೂ ಹೇಳುತ್ತಾರೆ) ಸ್ವಯಂವರಕ್ಕೆ ಹೋದವನು ಅವಳನ್ನು ಅಪಹರಿಸಿದನು. ಇದರಿಂದ ಕೌರವರು ಕ್ರುದ್ಧರಾದರು. ಸಾಂಬನನ್ನು ಬಂಧಿಸುವುದೆಂದೂ, ಯಾದವರು ಯುದ್ಧಕ್ಕೆ ಬಂದರೆ ಅವರಿಗೆ ತಕ್ಕ ಪಾಠ ಕಲಿಸುವುದೆಂದೂ ನಿಶ್ಚಯಿಸಿ ಅವರೆಲ್ಲ ಸಾಂಬನನ್ನು ಹಿಂಬಾಲಿಸಿದರು. ದುರ್ಯೋಧನ, ಕರ್ಣ, ಶಲ್ಯ, ಭೂರಿಶ್ರವ, ಯಜ್ಞಕೇತು ಮೊದಲಾದವರು ಕುರು ವೃದ್ಧರ ಅನುಮತಿಯನ್ನು ಪಡೆದು ಸಾಂಬನನ್ನು ಬಂಧಿಸಲು ಬಂದರು. ತನ್ನನ್ನು ಹಿಂಬಾಲಿಸುತ್ತಿದ್ದ ವೀರರನ್ನು ಸಾಂಬನು ಧನುಸ್ಸನೆತ್ತಿಕೊಂಡು ಸಿಂಹದಂತೆ ಏಕಾಕಿಯಾಗಿ ಎದುರಿಸಲು ನಿಂತನು. ಕೌರವನ ಕಡೆಯವರು ಕರ್ಣನ ನೇತೃತ್ವದಲ್ಲಿ ಸಾಂಬನ ಮೇಲೆ ಬಾಣಗಳನ್ನು ಪೇರಿಸಿದರು. ಗಾಯಗೊಂಡ ಸಾಂಬನು ಮತ್ತೂ ಕೋಪೋದ್ರಿಕ್ತನಾಗಿ ಒಂದೇ ಸಲ ಆರಾರು ಬಾಣಗಳನ್ನು ಕರ್ಣಾದಿ ಆರು ವೀರರ ಮೇಲೆ ಬಿಟ್ಟನು. ನಾಲ್ಕು ನಾಲ್ಕು ಬಾಣಗಳನ್ನು ಕುದುರೆಗಳ ಮೇಲೂ, ಒಂದೊಂದನ್ನು ಸಾರಥಿಗಳ ಮೇಲೂ, ಒಂದೊಂದನ್ನು ವೀರರ ಮೇಲೂ ಬಿಟ್ಟನು. ಸಾಂಬನ ಈ ಚಾತುರ್ಯವನ್ನು ಶತ್ರುವೀರರು ಪ್ರಶಂಸಿಸಿದರು. ಬಳಿಕ ಅವರೆಲ್ಲ ಒಟ್ಟಾಗಿ ಸಾಂಬನ ಕುದುರೆ, ಸಾರಥಿಗಳನ್ನು ಕೊಂದು ರಥವನ್ನು ಮುರಿದು ಹಾಕಿದರು. ಆದರೆ ಲಕ್ಷ್ಮಣೆಗೆ ಏಟಾಗದಂತೆ ನೋಡಿಕೊಂಡರು.

(ಮುಂದುವರಿಯುವುದು)

## ಹೊಸ ಬೆಳಕು

**ಪುಸ್ತಕ ಪರಿಚಯ :**
**"ನಮ್ಮವರು"**

*(ಉಡುಪಿ ತಾಲೂಕು ಸ್ಥಾನಿಕ ಬ್ರಾಹ್ಮಣರ ವಿಳಾಸ ಪುಸ್ತಕ)*

*ಪ್ರಕಾಶಕರು :*
ಗೋಪಣ್ಣಯ್ಯ ಗಂಗಮ್ಮ ಎಜ್ಯುಕೇಶನ್ ಟ್ರಸ್ಟ್ (GOGET), ಚಿಟ್ಪಾಡಿ, ಉಡುಪಿ.

"ನಮ್ಮವರು" ಎಂಬ ಈ ವಿಳಾಸ ಪುಸ್ತಕದಲ್ಲಿ ಮುನ್ನುಡಿಯಲ್ಲಿ ಎಮ್.ಪಾಲಚಂದ್ರರಾವ್ ಇವರು ತಿಳಿಸಿದಂತೆ "ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವ ನಿಟ್ಟಿನಲ್ಲಿ ದಿ। ಶ್ರೀ ಗೋಪಣ್ಣಯ್ಯನವರ ಮನದಾಸೆಯನ್ನು ಪೂರೈಸುವಲ್ಲಿ ಅವರ ಮೊಮ್ಮಕ್ಕಳು, ಮರಿಮಕ್ಕಳು, ಕುಟುಂಬ ಸದಸ್ಯರು ಐಕ್ಯಮತ್ಯದಿಂದ ಶ್ರೀ ಸಿ.ಎಸ್.ರಾವ್‌ರವರ ಮಾರ್ಗದರ್ಶನದಲ್ಲಿ ಒಂದು ಟ್ರಸ್ಟನ್ನು ದಿ। ಶ್ರೀ ಮಾರ್ಪಳ್ಳಿ ಗೋಪಣ್ಣಯ್ಯ ಗಂಗಮ್ಮನವರ ಹೆಸರಲ್ಲಿ ಸ್ಥಾಪಿಸಿದ್ದು ಮಾತ್ರವಲ್ಲದೆ ಈ ಟ್ರಸ್ಟ್‌ಗೆ ತಮ್ಮ ಆದಾಯದಿಂದ ಎಲ್ಲರೂ ಸ್ವಲ್ಪ ಹಣವನ್ನು ನಿಯಮಿತವಾಗಿ ಸ್ವಯಂ ಪ್ರೇರಣೆಯಿಂದ ಕೊಡುವರೆ ಬದ್ಧರಾಗಿರುವುದು ಪ್ರಶಂಸನೀಯ ಹಾಗೂ ಅನುಕರಣೀಯ. ಈ ಟ್ರಸ್ಟ್ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ, ಅಶಕ್ತರಿಗೆ ವೈದ್ಯಕೀಯ ವೆಚ್ಚಗಳಿಗಾಗಿ ಸ್ವಲ್ಪ ಮಟ್ಟಿನ ನೆರವು, ಹೀಗೆ ಈ ರೀತಿಯಾಗಿ ಕೆಲವು ರೀತಿಯಲ್ಲಿ ಸಮಾಜಕ್ಕೆ ತನ್ನಿಂದಾಗಬಹುದಾದ ಸಹಾಯಕ್ಕೆ ಸಜ್ಜಾಗಿದೆ. ಮಾನವನ ಬಾಳಿದು ದೇವವಿತ್ತ ಕೊಡುಗೆ. ತನ್ನಂತೆ ಪರರು ಎಂಬ ವಿವೇಕದಿಂದ ಕೆಲಸ ಮಾಡುವ ಈ ಟ್ರಸ್ಟ್‌ನ ಮಾನವ ಧರ್ಮ, ವಿದ್ಯಾವಂತನ ಗುರುತು ವಿನಯ ಎಂಬುದನ್ನು ಸದಾ ಮರೆಯದೆ ಸಮಾಜ ಸೇವೆಯಲ್ಲಿ ಸಮರ್ಪಣಾ ಭಾವದಿಂದ ದುಡಿದು ಕೃತಾರ್ಥರಾಗಿರುವುದನ್ನು ಗಮನಿಸಿದ್ದೇನೆ.

ಸಮಾಜ ಸೇವೆಯಲ್ಲಿ ಉಡುಪಿ ತಾಲೂಕು ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರ ಸಂಪರ್ಕಕ್ಕಾಗಿ ವಿಳಾಸ ಪುಸ್ತಕ ತಯಾರಿಯೂ ಒಂದಾಗಿದ್ದು ಸುಮಾರು 23 ವರ್ಷಗಳ ಹಿಂದೆ 1989ರಲ್ಲಿ ಉಡುಪಿ ಸ್ಥಾನಿಕ ಬ್ರಾಹ್ಮಣ ಸೇವಾ ಸಮಾಜದ ವತಿಯಿಂದ ತಯಾರಿಸಿ ಸಮಾಜಕ್ಕೆ ಒದಗಿಸಲಾಯಿತು. ನಂತರ ಪುನಃ 1994ರಲ್ಲಿ ಉಡುಪಿ ಸ್ಥಾನಿಕ ಬ್ರಾಹ್ಮಣ ಸಂಘದ ಯುವ ವಿಭಾಗದ ಸದಸ್ಯರಿಂದ ಹೆಚ್ಚು ಕಡಿಮೆ ತಾಲೂಕಿನ ಎಲ್ಲಾ ಮನೆಗಳಿಗೂ ಸಂದರ್ಶಿಸಿ ವಿವರ ಸಂಗ್ರಹಿಸಿ ಮುದ್ರಿಸಿ ಸಮಾಜಕ್ಕೆ ಕೊಡಲಾಗಿತ್ತು. ನಂತರ ಕಾಲಕ್ರಮೇಣ ಹಲವಾರು ಬದಲಾವಣೆಗಳು ಆಗಿದ್ದು ಇದಕ್ಕನುಗುಣವಾಗಿ ಹೊಸ ವಿಳಾಸ ಪುಸ್ತಕದ ಅವಶ್ಯಕತೆಯನ್ನು ಮನಗಂಡು ಗೋಪಣ್ಣಯ್ಯ ಗಂಗಮ್ಮ ಎಜ್ಯುಕೇಶನ್ ಟ್ರಸ್ಟ್ ಪರಿಷ್ಕೃತ ವಿಳಾಸ ಪುಸ್ತಕವನ್ನು ಈಗ ತಯಾರಿಸಿ ಸಮಾಜಕ್ಕೆ ಒದಗಿಸುತ್ತಿರುವುದು ಹರ್ಷದ ವಿಚಾರ."

ಈ ವಿಳಾಸ ಪುಸ್ತಕದಲ್ಲಿ ಟ್ರಸ್ಟಿನ ಸಂಚಾಲಕರು ಮತ್ತು ಪ್ರಕಾಶಕರು ಚಿಟ್ಪಾಡಿ ಸರ್ವೋತ್ತಮ ರಾವ್ ಇವರು ತಿಳಿಸಿದಂತೆ "ಉಡುಪಿ ತಾಲೂಕಿನ ನಮ್ಮ ಸಮಾಜ ಬಾಂಧವರ ವಿಳಾಸ ಪುಸ್ತಕವನ್ನು ಹೊಸತಾಗಿ ತಯಾರಿಸಬೇಕು ಎನ್ನುವುದು ಅನೇಕರ ಅಪೇಕ್ಷೆ. ಇದಕ್ಕಾಗಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ದಿಂದ ಹಲವಾರು ಪ್ರಯತ್ನವನ್ನು ಮಾಡಿದ್ದೆವು.

ಈಗ ಇದರ ಅವಶ್ಯಕತೆ ತುಂಬಾ ಜಾಸ್ತಿಯಾಗಿದ್ದುದರಿಂದ 1999ರಲ್ಲಿ ಸಂಘದಿಂದ ಪ್ರಕಟಿಸಿದ ವಿಳಾಸ ಪುಸ್ತಕವನ್ನೇ ಆಧಾರವಾಗಿರಿಸಿ ಅದರಲ್ಲಿದ್ದ ವಿಳಾಸವನ್ನು ಸರಿಪಡಿಸಿ ಹೊಸತಾಗಿ ಗೊತ್ತಿದ್ದವರ ವಿಳಾಸವನ್ನು ಸೇರಿಸಿ, ಪರಿಷ್ಕರಿಸಿ, ಈಗ ಪ್ರಕಾಶಿಸುತ್ತಿದ್ದೇನೆ.

ಈ ವಿಳಾಸ ಪುಸ್ತಕದಲ್ಲಿ ಹತ್ತು ಹಲವಾರು ವಿಳಾಸಗಳು ಬಿಟ್ಟುಹೋಗಿವೆ. ಅಂತವರು ದಯಮಾಡಿ ಅವರ ವಿಳಾಸವನ್ನು ವೈ.ಅಜಿತ್ ರಾಯರ ಬಳಿ ನಾನು ಇಟ್ಟಿರುವ ಪುಸ್ತಕದಲ್ಲಿ ಬರೆಯಬೇಕೆಂದು ವಿನಂತಿ. ಈ ಪುಸ್ತಕದಲ್ಲಿ ವಿಳಾಸ ಇದ್ದವರು ಕೂಡ ಅವರ ದೂರವಾಣಿ ಸಂಖ್ಯೆ, ರಕ್ತದ ಗುಂಪು, ಮಕ್ಕಳ ಹೆಸರು, ವಿದ್ಯೆ, ವೃತ್ತಿಯನ್ನು ಬರೆದರೆ ಮುಂದಿನ ವಿಳಾಸ ಪುಸ್ತಕದಲ್ಲಿ ಸೇರಿಸುತ್ತೇನೆ. ಈ ಪುಸ್ತಕದ ಬೆಲೆ ರೂ.25/-. ಈ ಮೊತ್ತ ಶ್ರೀಶಾರದಾ ದೇವಿಯ ಭಂಡಾರಕ್ಕೆ ಹೋಗುತ್ತದೆ. ಇದರೊಂದಿಗೆ ಈ ಪುಸ್ತಕವನ್ನು ಶ್ರೀಶಾರದಾ ದೇವಿಗೆ ಸಮರ್ಪಿಸುತ್ತಿದ್ದೇನೆ"

ಈ ವಿಳಾಸ ಪುಸ್ತಕ ಆಕರ್ಷಕ ಮುಖಪುಟವನ್ನು ಹೊಂದಿದೆ. 'ನಮ್ಮವರು' ಎಂಬ ಪುಸ್ತಕದ ಹೆಸರೇ ಸಮಾಜ ಪ್ರಿಯವಾಗಿದೆ. ಇದರಲ್ಲಿ ಉಡುಪಿ ತಾಲೂಕಿನ ಸ್ಥಾನಿಕ ಬ್ರಾಹ್ಮಣರ ಸುಮಾರು 500 ವಿಳಾಸಗಳಿವೆ. ವಿಳಾಸಗಳು ಸ್ಥಳದ ಕ್ರಮಾನುಗತದಲ್ಲಿವೆ.

– **ವೈ. ಮೋಹನ ರಾವ್.**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ.

# ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ-2012

ನಲ್ಮೆಯ ಸ್ಥಾನಿಕ ಬ್ರಾಹ್ಮಣ ಸಮಾಜ ಬಂಧುಗಳೇ,

ತಮಗೆ ತಿಳಿದಂತೆ ಮೇ ತಿಂಗಳ 12 ಮತ್ತು 13ರಂದು ನಮಗೆಲ್ಲಾ ಸುಗ್ಗಿ. ಉತ್ಸವದ ಸಮಯ- ಸ್ಥಾನಿಕ ಬ್ರಾಹ್ಮಣ ಸಮಾವೇಶ. ಅದೂ ಕೂಡಾ ಅಖಿಲ ಭಾರತ ಮಟ್ಟದ್ದು. ಏನಾಗುವುದೋ? ಹೇಗಾಗುವುದೋ? ಇದು ಬೇಕೋ? ಬೇಡವೋ? ಎಂಬ ಮೂಲಭೂತ ಪ್ರಶ್ನೆಗಳೊಂದಿಗೆ; ಇದು ಮಾಡಲೇಬೇಕಾದ ಕಾರ್ಯಕ್ರಮ, ಯಾವಾಗಲೋ ನಡೆದಿರಬೇಕಿತ್ತು. ಏಕೆ ಹಿಂದುಳಿದಿರಿ? ಎಂಬ ಪ್ರೋತ್ಸಾಹದ ನುಡಿಗಳೂ ಕೇಳಿಬಂದವು. ನಮ್ಮ ಸಮಾಜದ ಬಗ್ಗೆ ಅತೀವ ಪ್ರೀತಿ, ಗೌರವ ಹೊಂದಿರುವ ರಾಜರ್ಷಿ ಪೂಜ್ಯ ಡಾ| ವಿರೇಂದ್ರ ಹೆಗ್ಗಡೆಯವರ ಬಾಯಲ್ಲೇ ಇಂತಹ ಪ್ರೋತ್ಸಾಹಕ ಮಾತುಗಳು ಬಂದಾಗ ನಮ್ಮೀ ಪ್ರಯತ್ನಕ್ಕೆ ಆನೆ ಬಲ ದೊರಕಿತು. ಪರಮಪೂಜ್ಯ ಶೃಂಗೇರಿ ಗುರುಗಳೇ ಈ ಸಮಾರಂಭದ ಲಾಂಛನವನ್ನು ಬಿಡುಗಡೆಗೊಳಿಸಿ ಫಲಮಂತ್ರಾಕ್ಷತೆಯೊಂದಿಗೆ ಶುಭಾಶೀರ್ವಾದವನ್ನು ಅನುಗ್ರಹಿಸಿದರು. ಸ್ಥಾನಿಕ ಬ್ರಾಹ್ಮಣ ಸಮಾಜದ 25 ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ, ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ಈ ವಿಚಾರಗಳನ್ನು ಮುಂದಿಟ್ಟು, ಕಾರ್ಯಕ್ರಮಕ್ಕೆ ಸಂಬಂಧಿಸಿದ ರೂಪುರೇಶೆಗಳನ್ನು ಸಿದ್ಧಪಡಿಸಿಕೊಳ್ಳಲಾಗುತ್ತಿದೆ. ಎಲ್ಲರೂ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುತ್ತಾ ನಮ್ಮಲ್ಲಿ ತುಂಬಿರುವ ಸ್ಫೂರ್ತಿಯು ಯಶಸ್ವಿ ಸಮ್ಮೇಳನದ ಆಕಾಂಕ್ಷೆಗೆ ನೀರೆರೆಯುವ ಕೆಲಸ ಮಾಡುತ್ತಿವೆ. ನಾಲ್ಕು ಅತ್ಯಮೂಲ್ಯ ವಿಚಾರ ಸಂಕಿರಣಗಳ ಆಯೋಜನೆಗೆ ನಾವು ಆಹ್ವಾನಿಸಿರುವ ಅಭಿಪ್ರಾಯಗಳು ಸಾಗರೋಪಾದಿಯಲ್ಲಿ ಹರಿದು ಬಂದಿದ್ದು ವೈಶಿಷ್ಟ್ಯ ಪೂರ್ಣ ಚರ್ಚೆ, ನಿರ್ಣಯಗಳಿಗೆ ಕಾರಣವಾಗಲಿವೆ. ಹಿರಿಯರ ಉತ್ತೇಜನಕಾರಿ ಲೇಖನಗಳು ಮುಂದಿನ ನಾಲ್ಕು ಸಮ್ಮೇಳನಗಳಿಗೆ ಬೇಕಾದಷ್ಟು ಮಾಹಿತಿಯನ್ನು ಒದಗಿಸಿವೆ. ಈ ಎಲ್ಲಾ ಹಿರಿಯರ ಆಶೀರ್ವಾದಗಳೊಂದಿಗೆ ಸಮ್ಮೇಳನದ ತಯಾರಿ ಭರದಿಂದ ಸಾಗಿವೆ.

ಮನಸ್ಸನ್ನಾವರಿಸಿರುವ ಅವಾಸ್ತವವಾದ ಅಜ್ಞಾನದ ಪೊರೆಯನ್ನು ಕಳಚಿ ಲೋಕಾಚಾರ ವ್ಯವಹಾರ ಯಥಾರ್ಥ ಸ್ಥಿತಿಯನ್ನು ಗಳಿಸಿಕೊಳ್ಳುವುದರಿಂದ ನಮ್ಮ ವ್ಯಕ್ತಿತ್ವದ ವಿಕಾಸಕ್ಕೆ ಅಡ್ಡಿಯಾಗಿರುವಂಥ ಎಂತಹ ತೊಂದರೆಯನ್ನು ಕೂಡಾ ಹೋಗಲಾಡಿಸಲು ಸಾಧ್ಯ ಹಾಗೂ ಈ ಸಮ್ಮೇಳನವು ಅದಕ್ಕೆ ಸೇತುವಾಗಬಹುದೆಂಬ ಉದ್ದೇಶ ಈ ಸಮಾವೇಶದ್ದಾಗಿದೆ. ಸಮಾಜದ ಮುಖ್ಯ ವಾಹಿನಿಯಲ್ಲಿ ನಾವು ನಮ್ಮನ್ನು ತೊಡಗಿಸಿಕೊಂಡು, ನಮ್ಮ ಬಲಪ್ರದರ್ಶನದ ಪ್ರತೀಕವಾಗದೆ, ದುಂದುವೆಚ್ಚಕ್ಕೆ ಕಾರಣವಾಗದೆ, ಶಿಸ್ತುಬದ್ಧವಾದ, ವ್ಯವಸ್ಥಿತವಾದ ಸಮಾವೇಶವನ್ನು ನಡೆಸುವುದೇ ನಮ್ಮೆಲ್ಲರ ಆಶಯವಾಗಿದೆ. ನಮ್ಮ ಸಮಾಜದ ಸಮಸ್ಯೆಗಳನ್ನು, ನಮ್ಮ ಮುಂದಿರುವ ಸವಾಲುಗಳ ಚಿಂತನ- ಮಂಥನವೇ ಈ ಸಮಾರಂಭದ ವೈಶಿಷ್ಟ್ಯವಾಗಿದೆ. ''ಕಾಗೆಯೊಂದು ಅಗುಳ ಕಂಡರೆ ಕೂಗಿ ಕರೆಯದೇ ತನ್ನ ಬಳಗವ!'' ಎಂಬಂತೆ ಸದ್ವಿಚಾರಗಳ ಮಂಥನ ನಡೆಯುವ ಕಡೆ ತಮ್ಮೆಲ್ಲರನ್ನೂ ಆಹ್ವಾನಿಸಿ, ಒಟ್ಟುಗೂಡಿಸಿ ನಮ್ಮಲ್ಲಿರುವ ಖಿನ್ನತೆ, ವ್ಯಾಕುಲತೆ, ಅಧೈರ್ಯವನ್ನು ಹೋಗಲಾಡಿಸಿ ನಮ್ಮ ಸಮಾಜ ಬಲವರ್ಧನೆಯೂ ಸೇರಿ ವಿವಿಧ ಧ್ಯೇಯೋದ್ದೇಶಗಳನ್ನು ಸಾಧಿಸಲು ಟೊಂಕಕಟ್ಟಿ ನಿಂತಿದೆ ಈ ಸಮಾವೇಶ.

''ಸಾಲದು ಎನ್ನುವುದು ಬೇಕೆನಿಸುವುದಕ್ಕೆ ತಾಯಿ, ಬೇಕು ಎನ್ನುವುದು ಪ್ರಯತ್ನಕ್ಕೆ ಪ್ರಚೋದನೆ, ಪ್ರಯತ್ನ ಜನ್ಮದ ಸಾರ್ಥಕತೆ''. ಅನೇಕ ವರ್ಷಗಳಿಂದ ನೆನಗುದಿಗೆ ಬಿದ್ದಿರುವ ಅಖಿಲ ಭಾರತ ಮಟ್ಟದ ಸಮಾವೇಶವು ಇದೀಗ ಸಾಧ್ಯವಾಗಿ, ಮುಂದೆಯೂ ಇಂತಹ ಸಮಾವೇಶಗಳಿಗೆ ನಾಂದಿಯಾಗಬೇಕಿದೆ. ಜನಮೆಚ್ಚುವ ಕಾರ್ಯಕ್ರಮವಾಗಿ, ಸ್ಥಾನಿಕ ಬ್ರಾಹ್ಮಣ ಸಮಾಜದ ಒಗ್ಗಟ್ಟಿನ ದ್ಯೋತಕವಾಗಿ, ಮೌಲ್ಯಯುತ ಆಚಾರ, ವಿಚಾರ ಹೊಂದಿದ ಜನಾಂಗದ ಪ್ರತೀಕವಾಗಿ, ಸತ್ಯನಿಷ್ಠೆ ಸಚ್ಚಾರಿತ್ರ್ಯತೆಯ ಪ್ರತಿಬಿಂಬವಾಗಿ ಸ್ಥಾನಿಕ ಬ್ರಾಹ್ಮಣ ಸಮಾಜ ತನ್ನ ಇರುವನ್ನು ಪ್ರಕಟಿಸಿದಾಗ ಈ ಸಮಾವೇಶವು ಸಾರ್ಥಕ್ಯ ಕಾಣಲಿದೆ.

ನಾವು ಮನಸ್ಸೆಂಬ ಸಾಧನದೊಂದಿಗೆ ನಮ್ಮೆದುರಿಗಿರುವ ಅದೆಷ್ಟೋ ಸುಖ-ದುಃಖಗಳನ್ನು ಅನುಭವಿಸುತ್ತಾ ಮುಂದೆ ಸಾಗುತ್ತೇವೆ. ಬ್ರಾಹ್ಮಣ ಸಮಾಜದಲ್ಲೇ ಇದ್ದುಕೊಂಡು ತಾರತಮ್ಯಗಳನ್ನು ಅನುಭವಿಸುತ್ತಾ, ಚಂಚಲವಾದ ಮನಸ್ಸು ಅಚಲವಾಗಲು, ನಮ್ಮ ಸ್ವಾಭಿಮಾನವನ್ನು ಬಡಿದೆಬ್ಬಿಸಲು, ನಮ್ಮದೆ ಸಮಾಜದ ಸಾಧಕರೊಂದಿಗೆ, ಚಿಂತನಶೀಲರೊಂದಿಗೆ ಒಂದುಗೂಡುವ ಅಗತ್ಯತೆ ಇದೆ. ಈ ಒಂದುಗೂಡುವಿಕೆಯೊಂದಿಗೆ ತತ್ವಾಧಾರಿತ ಚಿಂತನೆಗಳ ವಿನಿಮಯ ಈ ಸಮಾವೇಶದ ವಿಶಿಷ್ಟ ಕಲ್ಪನೆಯಾಗಿದೆ. ನಾವೆಲ್ಲಾ ಒಟ್ಟು ಸೇರಿ ಮನಸ್ಸು ಮನಸ್ಸುಗಳ ಬಾಂಧವ್ಯ ಸಾಧ್ಯವಾಗಿಸೋಣ. ವಿವಿಧತೆಯಲ್ಲಿ ಏಕತೆ ಹೊಂದಿರುವ, ಜಗದಗಲ ವ್ಯಾಪಿಸಿರುವ ನಮ್ಮವರ ಮನೆಯ ಕದದೊಂದಿಗೆ ಮನದ ಕದ ತಟ್ಟುವುದೂ ನಮ್ಮೆಲ್ಲರ ಕರ್ತವ್ಯ. 'ನಾನು' ಎನ್ನುವುದನ್ನು ವೈಭವೀಕರಿಸದೇ, ಸಮಷ್ಠಿಯ ಹಿತದೃಷ್ಟಿಯಿಂದ ನಾವು, ನಮ್ಮವರು ಎಂಬ ಭಾವನೆಯನ್ನು ಬೆಳೆಸಿಕೊಳ್ಳೋಣ.

ಈ ಕ್ರಿಯಾತ್ಮಕ ಬದುಕನ್ನು ಶಬ್ದದಿಂದ ವರ್ಣಿಸಲು ಸಾಧ್ಯವಿಲ್ಲ. ಏಕೆಂದರೆ ಮಾತಿಗಿಂತ ಗ್ರಹಿಸಿದ ವಿಷಯಗಳೆಲ್ಲ ಬದುಕಿನ ವಾಸ್ತವತೆ ಆಗಿರುವುದಿಲ್ಲ. ಪರಿವರ್ತನಾಶೀಲ ಪ್ರಪಂಚದಲ್ಲಿ ಬದುಕೆಂಬುದು ಪ್ರವತ್ಯಾತ್ಮಕ ನೈಜ ಪ್ರವಾಹ. ಇದರಲ್ಲಿ ನಮ್ಮವರೆಲ್ಲ ಮಿಂದು, ಮಡಿಯುಟ್ಟು ಮುಂದಿನ ದಿನಗಳಲ್ಲಿ ಒಂದಾಗಬೇಕಿದೆ. ಬದುಕಿನ ಸ್ವಾಭಾವಿಕ ಪ್ರವರ್ತ್ಯಾತ್ಮಕತೆ ಎಂಬುದು ಶಬ್ದಾತೀತ ವಾಸ್ತವ ಸ್ಥಿತಿ. ನಾವೆಲ್ಲ ಸದ್ದು ಗದ್ದಲವಿಲ್ಲದೆ ಕೈಂಕರ್ಯದಲ್ಲಿ ಕೈ ಜೋಡಿಸಿದಾಗ ಮಾತ್ರ ಜೀವನದ ಸಾರ್ಥಕತೆ ಸಾಧ್ಯ. ಸಮಾಜದಲ್ಲಿನ ನಮ್ಮ ಬದುಕು ಅನುಭವಿಸಿ ಬರಿದು ಮಾಡಬಹುದಾದ ಪಾತ್ರೆ ಅಲ್ಲ. ಅದು ಅನುಭವದಿಂದ ತುಂಬಬೇಕಾದ ಪಾತ್ರೆ. ಈ ಅನುಭವಗಳನ್ನು ಹಂಚಿಕೊಂಡಾಗ ಪಾತ್ರೆಗಳು ತುಂಬುತ್ತವೆಯೇ ಹೊರತು ಬರಿದಾಗುವುದಿಲ್ಲ. ಆದ್ದರಿಂದ ತಮ್ಮೆಲ್ಲರ ಅನುಭವದ ಅಕ್ಷಯ ಪಾತ್ರೆಯನ್ನು ಹಂಚಿಕೊಳ್ಳಲು ನಾವು ಈ ವೇದಿಕೆ ಸಿದ್ಧ ಮಾಡುತ್ತಿದ್ದೇವೆ.

ಮಾನವ ತನ್ನ ಪರಿಸರದ ಪ್ರತಿಕೂಲಗಳನ್ನೆದುರಿಸಿ ತನ್ನ ಅನುಭವಗಳ ಚಿಂತನ-ಮಂಥನದಿಂದ ಹೊಸ ಹೊಸ ಮನೋಧರ್ಮಗಳನ್ನು ಕಂಡುಕೊಂಡು ಧರ್ಮಕ್ರಾಂತಿಯನ್ನುಂಟು ಮಾಡಬಹುದು. ಲೋಕದ ಇಂತಹ ಜ್ಞಾನಗಳಿಂದಲೇ ಬದುಕಿಗೆ ಬೆಳಕು, ಭೌತಿಕ, ಮಾನಸಿಕ ವ್ಯಕ್ತಿತ್ವದ ವಿಕಸನ ಸಾಧ್ಯ. ಎಲ್ಲರೊಂದಿಗೆ ಬೆರೆತು, ಬೇಕಾದಷ್ಟು ಅರಿತು, ಒಳಿತಿಗಾಗಿ ಚಿಂತಿಸಿ ಬಾಳಿದರೆ ಮನಸ್ಸು ಇಂದ್ರಿಯಗಳ ವಿಕಸನ ಸಾಧ್ಯ. ಇಂತಹ ಸಮಾವೇಶಗಳು ಇದಕ್ಕೆ ಪೂರಕ.

ಇಂತಹ ವಿಶಾಲವಾದ ದೃಷ್ಟಿಯಿಂದ ರೂಪಿತವಾದ ಸಮಾವೇಶಕ್ಕೆ ನೀವೂ ಬನ್ನಿ, ನಮ್ಮ ಸಮಾಜ ಬಾಂಧವರನ್ನೂ ಕರೆತನ್ನಿ. ನಾವೇನೆಂದು ಜಗತ್ತಿಗೆ ತೋರಿಸೋಣ. ''ಸ್ಥಾನಿಕ ಬ್ರಾಹ್ಮಣರೆಲ್ಲ ಒಂದಾಗೋಣ''.

-ಎಂ.ದೇವಾನಂದ ಭಟ್, ಬೆಳುವಾಯಿ

---

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥

## ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನ

**ಪಡುಬಿದ್ರಿ, ಉಡುಪಿ ತಾಲೂಕು.**

ಭಕ್ತಮಹಾಜನರೆ,

ಶ್ರೀ ಶ್ರೀಮತ್ ಪರಮಹಂಸಪರಿವ್ರಾಜಕಾಚಾರ್ಯವರ್ಯೇತ್ಯಾದಿ ಅನೇಕ
ಬಿರುದಾವಲೀಭೂಷಿತರಾದ ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ
ಶ್ರೀ ಶ್ರೀ ಭಾರತೀತೀರ್ಥಮಹಾಸ್ವಾಮಿಗಳವರ ಪರಮಾಶೀರ್ವಾದಾನುಗ್ರಹಗಳಿಂದ

ಸ್ವಸ್ತಿ| ಶ್ರೀ ಶಾಲಿವಾಹನ ಶಕವರ್ಷ 1934ನೇ ನಂದನನಾಮ ಸಂವತ್ಸರದ ವೈಶಾಖ ಶುಕ್ಲ
ದ್ವಿತೀಯೆಯಿಂದ ಪಂಚಮಿಯವರೆಗೆ ತಾ.23-04-2012 ಸೋಮವಾರದಿಂದ
ತಾ.26-04-2012 ಗುರುವಾರದ ವರೆಗೆ

**ಬ್ರಹ್ಮಶ್ರೀ ವೇದಮೂರ್ತಿ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ**

ಶ್ರೀದೇವರ

### ಬ್ರಹ್ಮಕುಂಭಾಭಿಷೇಕಮಹೋತ್ಸವವನ್ನು

ಸಂಪನ್ನಗೊಳಿಸುವುದೆಂದು ಸಂಕಲ್ಪಿಸಿದ್ದೇವೆ.
ಶ್ರೀ ಗುರುದೇವತಾನುಗ್ರಹದಿಂದ ನೆರವೇರಲಿರುವ ಈ ದೇವತಾಪ್ರೀತ್ಯರ್ಥವಾದ
ಕಾರ್ಯಕ್ರಮದಲ್ಲಿ ತಾವೆಲ್ಲ ಭಾಗವಹಿಸಿ, ತನು ಮನ ಧನಗಳಿಂದ ಸಹಕರಿಸಿ,
ಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

**ಆಡಳಿತ ಮಂಡಳಿ  ಜೀರ್ಣೋದ್ಧಾರ ಸಮಿತಿ  ಬ್ರಹ್ಮಕಲಶ ಸಮಿತಿ**

**ಕಾರ್ಯಕ್ರಮ ಸೂಚಿ**

ತಾ.21-4-2012 ಶನಿವಾರ ಸಂಜೆ ಗಂಟೆ 5-00ಕ್ಕೆ ಕಾಂಚಿನಗರ ವಿಷ್ಣುಮೂರ್ತಿ ದ್ವಾರದಿಂದ ಶ್ರೀ ಮಹಾಗಣಪತಿ ದೇವರ ನೂತನ ಬಿಂಬ ಮತ್ತು ಗ್ರಾಮದ ಹತ್ತು ಸಮಸ್ತರ ಹಸಿರುವಾಣಿ ಕಾಣಿಕೆಯ ಮೆರವಣಿಗೆ.

ರಾತ್ರಿ ಗಂಟೆ 8-00ರಿಂದ ನೂತನ ಬಿಂಬ ಶುದ್ಧಿ, ಅಕ್ಷರ ಹೋಮ, ಕೌತುಕ ಬಂದನ ಮತ್ತು ಜಲಾಧಿವನ

ತಾ.23-4-2012 ಸೋಮವಾರ ಪ್ರಾತಃಕಾಲ 8-00 ಗಂಟೆಗೆ ದೇವತಾ ಪ್ರಾರ್ಥನೆ, ಪುಣ್ಯಾಹವಾಚನ, ದೇವನಾಂದಿ. ಆಚಾರ್ಯಾದಿಋತ್ವಿಗ್ವರಣ, ಮಹಾಗಣಪತಿ ಹೋಮ, ಮೃತ್ಯುಂಜಯ ಹೋಮ, ಶ್ರೀ ವಿಷ್ಣುಮೂರ್ತಿ ದೇವರ ಬಿಂಬಶುದ್ಧಿ ಕರ್ಮಗಳು, ತತ್ತ್ವಹೋಮ. ಸಾಯಂಕಾಲ : ನೂತನನಿರ್ಮಿತ ಸುತ್ತುಪೌಳಿಯು ಪರಿಗ್ರಹ, ಸ್ಥಲಶುದ್ಧಿ, ಪ್ರಾಸಾದ ಶುದ್ಧಿ, ರಾಕ್ಷೋಘ್ನ ಹೋಮ, ವಾಸ್ತುಪೂಜಾ-ಹೋಮ-ಬಲಿ, ದಿಗ್ಬಲಿ.

ತಾ.24-4-2012 ಮಂಗಳವಾರ ಪ್ರಾತಃಕಾಲ ನವಗ್ರಹಹೋಮ, ಪ್ರಾಯಶ್ಚಿತ್ತ ಹೋಮಗಳು, ಶ್ರೀ ಗಣಪತಿ ಹಾಗೂ ಶ್ರೀ ಶಾಸ್ತಾದೇವರ ಬಿಂಬಶುದ್ಧಿಸ್ನಪನ, ಶಯ್ಯಾನಯನ. ಸಾಯಂಕಾಲ : ಶಯ್ಯಾಧಿವಾಸಕರ್ಮ, ಪೀಠಶಿಲಾ-ಬ್ರಹ್ಮಶಿಲಾಧಿವಾಸ, ಶಿರಸ್ತತ್ತ್ವ ಹೋಮ, ಅಧಿವಾಸ ಹೋಮ, ಪ್ರತಿಷ್ಠಾಪೂರ್ವವಿಧಿಗಳು. 49 ಕಲಶಾತ್ಮಕ ಬ್ರಹ್ಮಕಲಶಸ್ಥಾಪನೆ.

ತಾ.25-4-2012 ಬುಧವಾರ ಪ್ರಾತಃಕಾಲ ಕಲಶಾಧಿವಾಸ ಹೋಮ, ರತ್ನನ್ಯಾಸ. 8-15ಕ್ಕೆ ವೃಷಭಲಗ್ನದಲ್ಲಿ ಶ್ರೀ ಗಣಪತಿದೇವರ ಪ್ರತಿಷ್ಠೆ, ಕಲಶಾಭಿಷೇಕ, ಶ್ರೀ ಗಣಪತ್ಯಥರ್ವಶೀರ್ಷ ಸಹಸ್ರಮೋದಕಹವನ, ಪ್ರಸನ್ನ ಪೂಜೆ. 11-36ಕ್ಕೆ ಕರ್ಕಾಟಕ ಲಗ್ನದಲ್ಲಿ ಶ್ರೀ ಶಾಸ್ತಾವು ದೇವರ ಪುನಃ ಪ್ರತಿಷ್ಠೆ, ಕಲಶಾಭಿಷೇಕ, ಪ್ರಸನ್ನಪೂಜೆ, ಶಾಂತಿಹೋಮಗಳು. ಸಾಯಂಕಾಲ : ಕಲಶಮಂಡಲರಚನೆ, ಅಷ್ಟೋತ್ತರಶತಕಲಶಾತ್ಮಕ ಬ್ರಹ್ಮಕುಂಭಸ್ಥಾಪನೆ. ಅಧಿವಾಸಹೋಮ.

ತಾ.26-4-2012 ಗುರುವಾರ ಪ್ರಾತಃಕಾಲ ಅಷ್ಟಬಂಧಸ್ಥಾಪನೆ, 8-11ಕ್ಕೆ ವೃಷಭಲಗ್ನದಲ್ಲಿ ಬ್ರಹ್ಮಕುಂಭಾಭಿಷೇಕ, ವಿಷ್ಣುಸಹಸ್ರನಾಮ ಹವನ, ದುರ್ಗಾಹವನ, ಪ್ರಸನ್ನಪೂಜೆ, ಅನ್ನಸಂತರ್ಪಣೆ, ಮಂತ್ರಾಕ್ಷತೆ, ಮಂಗಲಾಚರಣೆ. ಪೂರ್ವಾಹ್ನ ಗಂಟೆ 11-00ಕ್ಕೆ ಶ್ರೀ ಶಂಕರ ಜಯಂತಿ ಉತ್ಸವ. ಸಂಜೆ ಗಂಟೆ 6-00ರಿಂದ ವಿಶೇಷ ಹೂವಿನ ಪೂಜೆ.

---

## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ-2012

### ಸಮಾವೇಶ, ವಿಚಾರ ಗೋಷ್ಠಿಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು

**ದಿನಾಂಕ : 12-05-2012ನೇ ಶನಿವಾರ ಮತ್ತು ತಾ.13-05-2012ನೇ ರವಿವಾರ ಸ್ಥಳ : ಶ್ರೀಶಾರದಾ ಮಂಟಪ, ಶಾರದಾ ನಗರ, ಉಡುಪಿ-576102.**





ಆತ್ಮೀಯ ಸಮಾಜ ಬಾಂಧವರೇ,

**ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹದಿಂದ**
ಸ್ಥಾನಿಕ ಬ್ರಾಹ್ಮಣ ಸಮಾಜದ ವಿವಿಧ ಸಂಘಟನೆಗಳ ಪದಾಧಿಕಾರಿಗಳ ಪರಸ್ಪರ ಪರಿಚಯ, ಸಂಘಟನೆ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವ್ಯಕ್ತಿಗಳನ್ನು ಗುರುತಿಸಿ ಗೌರವಿಸುವುದು,
ಸಮಾಜದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ, ಮುಂದಿನ ಪೀಳಿಗೆಗೆ ಮಾರ್ಗದರ್ಶನ ಮೊದಲಾದ ಉದ್ದೇಶಗಳನ್ನು ಇರಿಸಿಕೊಂಡು

**ತಾ.12-05-2012ನೇ ಶನಿವಾರ ಮತ್ತು ತಾ.13-05-2012ನೇ ರವಿವಾರ ಉಡುಪಿ ಕುಂಜಿಬೆಟ್ಟು ಶಾರದಾನಗರದಲ್ಲಿರುವ ಶ್ರೀ ಶಾರದಾ ಮಂಟಪದಲ್ಲಿ**


ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ-2012ನ್ನು ಆಯೋಜಿಸಲಾಗಿದೆ.

ಈ ಸಮಾವೇಶದಲ್ಲಿ ಸ್ಥಾನಿಕ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ತನು-ಮನ-ಧನಗಳಿಂದ ಸಹಕರಿಸಿ, ಸಮಾವೇಶದ ಯಶಸ್ಸಿಗೆ ಕಾರಣಕರ್ತರಾಗಬೇಕಾಗಿ ಅಪೇಕ್ಷಿಸುವ,

**(ಕಾರ್ಯಕ್ರಮ ವಿವರಗಳು : 5ನೇ ಪುಟದಲ್ಲಿ)**

**ಪದಾಧಿಕಾರಿಗಳು, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ ಸಮಿತಿ 2012,**

## ಈಶ್ವರಯ್ಯನವರಿಗೆ 'ಡಾ। ಸುನೀತಾ ಶೆಟ್ಟಿ ಸಾಹಿತ್ಯ ಪ್ರಶಸ್ತಿ'



ಮುಂಬಯಿ ಕರ್ನಾಟಕ ಸಂಘ 2010ರಿಂದ ಅಖಿಲ ಭಾರತ ಮಟ್ಟದಲ್ಲಿ ಕನ್ನಡ ನಾಡುನುಡಿಗೆ ಗಣನೀಯ ಸೇವೆ ಸಲ್ಲಿಸಿದ ಕನ್ನಡಿಗರಿಗೆ 'ಡಾ। ಸುನೀತಾ ಶೆಟ್ಟಿ ಸಾಹಿತ್ಯ ಪ್ರಶಸ್ತಿ' ನೀಡಿ ಗೌರವಿಸಲು ನಿರ್ಧರಿಸಿದೆ. ಡಾ। ಸುನೀತಾ ಶೆಟ್ಟಿ ಸಾಹಿತ್ಯ ಪ್ರಶಸ್ತಿ ನಿರ್ಣಾಯಕ ಸಮಿತಿಯು 2012ರ ಸಾಲಿನ ಪ್ರಶಸ್ತಿಗಾಗಿ ಸಾಹಿತ್ಯ, ಲಲಿತಕಲೆ, ವಿಮರ್ಶೆ, ಪತ್ರಿಕಾ ರಂಗಗಳಲ್ಲಿ ಅನುಪಮ ಸೇವೆ ಸಲ್ಲಿಸಿರುವ ಶ್ರೀ ಎ. ಈಶ್ವರಯ್ಯ ಅವರನ್ನು ಆಯ್ಕೆ ಮಾಡಿರುತ್ತದೆ ಎಂದು ಸಂಘದ ಗೌರವ ಕಾರ್ಯದರ್ಶಿ ಡಾ। ಭರತ್ ಕುಮಾರ್ ಪೊಲಿಪು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ. ಪ್ರಶಸ್ತಿಯು ರೂ.10,000 ನಗದು, ಪ್ರಶಸ್ತಿ ಫಲಕ ಮತ್ತು ಸನ್ಮಾನ ಪತ್ರವನ್ನು ಒಳಗೊಂಡಿರುತ್ತದೆ.

## ಕಾರ್ಕಳ : ಶಿಕ್ಷಕದ್ವಯರಿಗೆ ಸನ್ಮಾನ



ನಾವು ಇಂದು ಹಿರಿಯ, ಬಹುಮುಖ ಪ್ರತಿಭಾನ್ವಿತ ಲೇಖಕಿ, ಶಿಕ್ಷಕಿ, ಭಾರತ್ ಸ್ಕೌಟ್ ಗೈಡ್ಸ್‌ನ ರಾಷ್ಟ್ರೀಯ ತರಬೇತುದಾರರಾದ ಶ್ರೀಮತಿ ಸಾವಿತ್ರಿ ಮನೋಹರ್ ಹಾಗೂ ಜಿಲ್ಲಾ ಉತ್ತಮ ಶಿಕ್ಷಕಿ, ಕಿರಿಯ ಶಿಕ್ಷಕಿ ಪ್ರಶಸ್ತಿ ಪುರಸ್ಕೃತ ಶ್ರೀಮತಿ ಸುಮನ ಜಗದೀಶರವರನ್ನು ಸನ್ಮಾನಿಸುವ ಮೂಲಕ ನಮ್ಮ ಸಂಘ ಗೌರವಕ್ಕೆ ಪಾತ್ರವಾಗಿದೆ ಎಂದು ನಿವೃತ್ತ ಪ್ರೌಢಶಿಕ್ಷಣ ಮಂಡಳಿಯ ನಿರ್ದೇಶಕ ಶ್ರೀ ರಘುರಾಮ ಸೋಮಯಾಜಿ ನುಡಿದರು.

ಅವರು ಕಾರ್ಕಳ ತಾಲೂಕು ಬ್ರಾಹ್ಮಣ ಸಂಘದ ವತಿಯಿಂದ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ತೆಳ್ಳಾರು ಸರಕಾರಿ ಪ್ರೌಢಶಾಲಾ ನಿವೃತ್ತ ಸ್ಥಾಪಕ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾವಿತ್ರಿ ಮನೋಹರ್‌ರವರನ್ನು ಭಾರತಿ ಸ್ಕೌಟ್ಸ್ ಗೈಡ್ಸ್ ಸಂಸ್ಥೆಯಲ್ಲಿ ಸಲ್ಲಿಸುತ್ತಿರುವ ಸೇವೆ ಹಾಗೂ ಸಾಹಿತ್ಯ ರಚನೆಗಾಗಿ ಸನ್ಮಾನಿಸಿದರು ಹಾಗೂ ಮತ್ತೋರ್ವ ಬಜಗೋಳಿಯ ಶಿಕ್ಷಕಿ ಶ್ರೀಮತಿ ಸುಮನ ಜಗದೀಶರು ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿ ಪಡೆದ ಬಗ್ಗೆ ಅವರನ್ನು ಸನ್ಮಾನಿಸಿದರು. ಕಾರ್ಕಳ ಶಂಕರ ಪ್ರತಿಷ್ಠಾನ ತನ್ನ ಈ ಇಬ್ಬರು ಸದಸ್ಯರನ್ನು ಅಭಿನಂದಿಸುತ್ತದೆ.

-ಕೃತಿ, ಹೊಸನಗರ, ಕಾರ್ಕಳ

## ಮಂಗಳೂರು ಶ್ರೀ ಸುಬ್ರಹ್ಮಣ್ಯ ಸದನ : ಶ್ರದ್ಧಾಂಜಲಿ ಸಭೆ

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಇತ್ತೀಚೆಗೆ ಅಗಲಿದ ಸಮಾಜದ ಇಬ್ಬರು ಹಿರಿಯ ಚೇತನಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ದಿ। ಶ್ರೀ ದಯಾನಂದ ಎಸ್.ರಾವ್ ಇವರನ್ನು ಸ್ಮರಿಸುತ್ತಾ ಸಮಾಜಕ್ಕೆ ಅವರು ನೀಡಿದ ಕೊಡುಗೆ ಹಾಗೂ ಅವರ ಶಿಸ್ತುಬದ್ಧ ಜೀವನಗಳ ಬಗ್ಗೆ ಶ್ರೀಮತಿ ಕವಿತಾ ಶಾಸ್ತ್ರಿಯವರು ಸಂಕ್ಷಿಪ್ತವಾಗಿ ತಿಳಿಸಿದರು. ನಂದಳಿಕೆ ಬಾಲಚಂದ್ರರಾವ್ ಇವರು ಮಾತನಾಡಿ ಇತ್ತೀಚಿನವರೆಗೂ ಶ್ರೀ ಸಭಾದ ಬಗ್ಗೆ ದಿ। ಶ್ರೀ ದಯಾನಂದ ಎಸ್.ರಾವ್ ಅವರಿಗಿದ್ದ ಒಡನಾಟದ ಬಗ್ಗೆ ಸ್ಮರಿಸುತ್ತಿದ್ದ ಅವರು ಮುಂದಿನ ಕೆಲವು ಕಾರ್ಯಕ್ರಮಗಳನ್ನು ಶ್ರೀ ಸಭಾದಲ್ಲಿ ನಡೆಸುವ ಯೋಚನೆಯನ್ನು ತಮ್ಮಲ್ಲಿ ತಿಳಿಸಿದ್ದರೆಂದು ನೆನಪಿಸುತ್ತಾ ಅವರನ್ನು ಕಳಕೊಂಡ ನಮ್ಮ ಸಮಾಜಕ್ಕೆ ಇದು ತುಂಬಲಾರದ ನಷ್ಟವೆಂದು ತಿಳಿಸಿದರು. ಇತ್ತೀಚೆಗೆ ನಿಧನರಾದ ಇನ್ನೋರ್ವ ಹಿರಿಯ ಚೇತನ ಶ್ರೀ ಬಿ.ಕೆ.ಮಾಧವರಾವ್‌ರವರ ಬಗ್ಗೆ ಶ್ರೀಸಭಾದ ಅಧ್ಯಕ್ಷರಾದ ಶ್ರೀಯುತ ಜಗನ್ನಿವಾಸ ರಾವ್‌ರವರು ಮಾತನಾಡಿ ಮಂಗಳೂರಿನಲ್ಲಿರುವಷ್ಟು ಸಮಯ ಅವರು ಶ್ರೀಸಭಾದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದರೆಂದು ಸ್ಮರಿಸಿದರು. ವಿದ್ಯಾಭ್ಯಾಸ ಹಾಗೂ ಸಂಸ್ಕೃತ ಭಾಷೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಶ್ರೀಸಭಾದಲ್ಲಿ ದತ್ತಿನಿಧಿಯನ್ನು ಸ್ಥಾಪಿಸಿ ಸಮಾಜಕ್ಕೆ ನೆರವಾದ ಅವರನ್ನು ಕಳೆಕೊಂಡದ್ದು ನಮಗೆಲ್ಲಾ ದುಃಖದ ವಿಚಾರವೆಂದು ತಿಳಿಸಿದರು. ಇದೇ ವೇಳೆ ದಿ। ದಯಾನಂದ ಎಸ್.ರಾವ್, ದಿ। ಬಿ.ಕೆ.ಮಾಧವರಾವ್ ಹಾಗೂ ಶ್ರೀಮತಿ ಸುನಂದಾ ಶಾಸ್ತ್ರಿಯವರ ಭಾವಚಿತ್ರವನ್ನು ಅನಾವರಣಗೊಳಿಸಲಾಯಿತು.

-ಪಿ. ಶ್ರೀಕಾಂತರಾವ್

## ಶಂಕರ ಪ್ರತಿಷ್ಠಾನ ಕಾರ್ಕಳ : ಸಂಭ್ರಮದ ಶಿವರಾತ್ರಿ

ಶೃಂಗೇರಿ ಶಂಕರ ಮಠದ ಭಕ್ತರ "ಶಂಕರ ಪ್ರತಿಷ್ಠಾನ ಕಾರ್ಕಳ" ಇದರ ವತಿಯಿಂದ ತೆಳ್ಳಾರು ರಸ್ತೆಯಲ್ಲಿರುವ "ದುರ್ಗಾ ಪ್ರಸಾದ"ದಲ್ಲಿ ಮಹಾಶಿವರಾತ್ರಿ ಸಂಭ್ರಮ ಸಡಗರದಿಂದ ನಡೆಯಿತು. ಮುಂಜಾನೆಯಿಂದಲೇ ನಡೆದ ಪೂಜಾ ತಯಾರಿಯಲ್ಲಿ ಪ್ರತಿಷ್ಠಾನದ ಪದಾಧಿಕಾರಿಗಳು ಸಕ್ರಿಯವಾಗಿ ಭಾಗವಹಿಸಿದರು. ಡಾ। ನಿರಂಜನ ಭಟ್ಟರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಶಿವಾರಾಧನೆ ಅದ್ದೂರಿಯಿಂದ ನಡೆಯಿತು.

ಪ್ರತಿಷ್ಠಾನದ ಅಧ್ಯಕ್ಷ ಶ್ರೀ ರಾಮಮೋಹನರಾವ್‌ರವರ ನೇತೃತ್ವದಲ್ಲಿ ಧಾರ್ಮಿಕ ವಿಧಿವಿಧಾನಗಳು ನಡೆದವು. ಶ್ರೀ ಕೃತಿವಾಸಶರ್ಮ ಇನ್ನ, ಶ್ರೀ ರತ್ನಾಕರರಾವ್ ಪರಪ್ಪು ಮತ್ತು ಶ್ರೀ ಶಶಿಧರ ಕೋಲ್ಲೆರವರಿಂದ ರುದ್ರಪಾರಾಯಣ ನಡೆಯಿತು. ನಂತರ ಶಂಕರ ಪ್ರತಿಷ್ಠಾನದ ಮಹಿಳಾ ವಿಭಾಗದವರ ಭಜನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಹಾಮಂಗಳಾರತಿಯ ನಂತರ ಶ್ರೀ ನಿರಂಜನ ಭಟ್ಟರು ಶಿವರಾತ್ರಿ ಆಚರಣೆಯನ್ನು ಭಕ್ತಿ ಶ್ರದ್ಧೆಗಳಿಂದ ಮಾಡುವುದರಿಂದ ದೊರೆವ ಫಲವೇನೆಂದು ವಿವರಿಸಿದರು. ಮಹಾಪ್ರಸಾದದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಶ್ರೀ ಅನಿಲ್‌ಕುಮಾರ್ ಕೆಮ್ಮಣ್ಣು ಇವರು ಕಾರ್ಯಕ್ರಮಕ್ಕೆ ಆರ್ಥಿಕ ಸಹಕಾರ ನೀಡಿದ್ದರು. ಜೊತೆ ಕಾರ್ಯದರ್ಶಿ ನಕ್ರೆ ಶಿವರಾವ್ ಧನ್ಯವಾದ ಸಲ್ಲಿಸಿದರು.

## ಕುಂಜಿಬೆಟ್ಟು ಉಡುಪಿ : ಎಸ್.ಎಸ್.ಎಲ್.ಸಿ. ತರಬೇತಿ ಶಿಬಿರ



ಸಂಘದ ಶಿಕ್ಷಣ, ವಿದ್ಯಾರ್ಥಿವೇತನ ಮತ್ತು ತರಬೇತಿ ವೇದಿಕೆಯ ಅಂಗವಾಗಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗಾಗಿ ಒಂದು ದಿನದ ತರಬೇತಿ ಶಿಬಿರವನ್ನು ತಾ.11-03-2012ರಂದು ಶ್ರೀಶಾರದಾ ಮಂಟಪದಲ್ಲಿ ನಡೆಸಲಾಯಿತು.

ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ಅವರು ಶಿಬಿರವನ್ನು ಉದ್ಘಾಟಿಸಿ ಶಿಬಿರದ ಮುಖ್ಯ ಉದ್ದೇಶಗಳನ್ನು ತಿಳಿಸಿ ಶಿಬಿರದ ಸಂಪೂರ್ಣ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡಕೊಳ್ಳಬೇಕೆಂದು ಕರೆ ನೀಡಿದರು. ಖಜಾಂಚಿ ಡಾ। ವೈ. ಸುದರ್ಶನ ರಾವ್ ಎಸ್‌ಎಸ್‌ಎಲ್‌ಸಿ ಹಂತದ ಪ್ರಾಮುಖ್ಯತೆಯನ್ನು ತಿಳಿಸಿದರು. ವೇದಿಕೆಯ ಅಧ್ಯಕ್ಷರಾದ ಡಾ। ವೈ. ರವೀಂದ್ರನಾಥ ರಾವ್ ಶಿಬಿರವು ಶಾಲಾ ತರಗತಿಯಿಂದ ಹೇಗೆ ಭಿನ್ನವಾಗಿದೆ ಎಂದು ತಿಳಿಸಿ ಇಂತಹ ಶಿಬಿರಗಳು ವಿದ್ಯಾರ್ಥಿಗಳಿಗೆ ಹೇಗೆ ಅನುಕೂಲವಾಗುತ್ತವೆ ಎಂದು ತಿಳಿಸಿದರು. ವೇದಿಕೆಯ ಸಂಚಾಲಕರಾದ ಶ್ರೀ ಪ್ರಭಾಕರ ಭಂಡಿ ಕಾರ್ಯಕ್ರಮ ನಿರ್ವಹಿಸಿದರು.

ಶಿಬಿರದ ಬೆಳಗ್ಗಿನ ಗೋಷ್ಠಿಯಲ್ಲಿ ಪರೀಕ್ಷಾ ಸಿದ್ಧತೆ, ಪರೀಕ್ಷಾ ಕೊಠಡಿಯಲ್ಲಿ ಅನುಸರಿಸ ಬೇಕಾಗಿರುವ ಕಾರ್ಯವಿಧಾನಗಳ ಕುರಿತು ಡಾ। ವೈ. ರವೀಂದ್ರನಾಥ ರಾವ್ ಮಾಹಿತಿ ನೀಡಿದರು. ಶ್ರೀ ಪ್ರಭಾಕರ ಭಂಡಿಯವರು ಜೀವಶಾಸ್ತ್ರ ಪಾಠಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಉಪಯುಕ್ತ ಚಿತ್ರಗಳನ್ನು ಬಿಡಿಸುವ ಕ್ರಮಗಳನ್ನು ತಿಳಿಸಿದರು. ಶ್ರೀ ನಿರಂಜನ ರಾವ್ ಹೆರ್ಗ ಗಣಿತ ವಿಷಯದ ಕುರಿತು ವಿಸ್ತಾರವಾದ ಮಾಹಿತಿಗಳನ್ನು ತಿಳಿಸಿದರು. ಮಧ್ಯಾಹ್ನದ ಗೋಷ್ಠಿಯಲ್ಲಿ ಶ್ರೀ ನಾಗೇಂದ್ರ ಪೈ, ಮಣಿಪಾಲ ಇವರು ಭೌತಶಾಸ್ತ್ರದ ಕುರಿತು ವಿವರವಾದ ಮಾಹಿತಿ ನೀಡಿ ಅನೇಕ ಪ್ರಶ್ನೆಗಳನ್ನು ಬಿಡಿಸಿ ಹೇಳಿದರು. ಎಲ್ಲಾ ತರಗತಿಗಳನ್ನು ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದ ವಿದ್ಯಾರ್ಥಿಗಳೆಲ್ಲರಿಗೂ ಅನುಕೂಲವಾಗುವಂತೆ ನಡೆಸಲಾಯಿತು. ಉಡುಪಿ ಮತ್ತು ದ.ಕ.ಜಿಲ್ಲೆಗಳಿಂದ ಹೆಚ್ಚಿನ ವಿದ್ಯಾರ್ಥಿಗಳು ಈ ಶಿಬಿರದಲ್ಲಿ ಭಾಗವಹಿಸಿದ್ದರು.

ಶಿಬಿರದ ಸಮಾರೋಪ ಸಮಾರಂಭದಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಕೃಷ್ಣಮೂರ್ತಿ ರಾವ್ ಶಿಬಿರದ ಯಶಸ್ಸಿನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಠ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನ ಕೊಡುಗೆಯಾಗಿ ಎಲ್ಲಾ ವಿದ್ಯಾರ್ಥಿಗಳಿಗೆ 'ಹತ್ತನೇ ತರಗತಿ-ಪಿಯುಸಿ ನಂತರದ' 'ವಿದ್ಯಾಭ್ಯಾಸ ಮಾರ್ಗದರ್ಶನ' ಪುಸ್ತಕವನ್ನೂ ವಿತರಿಸಲಾಯಿತು. ಡಾ। ವೈ. ರವೀಂದ್ರನಾಥ ರಾವ್, ಶ್ರೀ ಅರವಿಂದ ಕುಮಾರ್, ಶ್ರೀ ಪ್ರಕಾಶ್ ರಾವ್ ಕೋಲ್ಪೆ, ಶ್ರೀ ವೈ. ಮೋಹನ್ ರಾವ್ ಉಪಸ್ಥಿತರಿದ್ದರು. ಶ್ರೀ ಮಂಜುನಾಥ ಹೆಬ್ಬಾರ್ ಊಟೋಪಚಾರ ವ್ಯವಸ್ಥೆಗೊಳಿಸಿ ದರು. ಮೆನೇಜರ್ ಶ್ರೀ ಅಜಿತ್ ರಾವ್ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು. ಶ್ರೀ ಪ್ರಭಾಕರ ಭಂಡಿ ಸ್ವಾಗತಿಸಿ ವಂದಿಸಿದರು.

-ಪ್ರಭಾಕರ ಭಂಡಿ

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಜಗದ್ಗುರುಗಳ ವರ್ಧಂತ್ಯುತ್ಸವ



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.25-03-2012ರ ರವಿವಾರದಂದು ಜಗದ್ಗುರು ಶೃಂಗೇರಿ ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮಿಗಳ ವರ್ಧಂತ್ಯುತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಬೆಳಿಗ್ಗೆ ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ, ಲಲಿತ ಸಹಸ್ರನಾಮ ಹಾಗೂ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ ನಡೆಸಿ ಶ್ರೀ ಸತ್ಯನಾರಾಯಣ ಪೂಜೆ ಸಂಕಲ್ಪವನ್ನು ನಡೆಸಲಾಯಿತು. ತದನಂತರ ಮಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಂ.ಆರ್.ವಾಸುದೇವರವರು ಶ್ರೀ ಗುರುಗಳ ಸಾತ್ವಿಕ ಮನೋಭಾವ, ದೈವಿಕ ಶಕ್ತಿಗಳು ಹಾಗೂ ಶೃಂಗೇರಿ ಪೀಠದ ಮಹತ್ವಗಳ ಬಗ್ಗೆ ಸಂಕ್ಷಿಪ್ತವಾಗಿ ಸಭಿಕರಿಗೆ ತಿಳಿಸಿದರು. ಶ್ರೀ ಗುರುಗಳ ಪರಮಾನುಗ್ರಹದಿಂದ ಸಮಾಜದಲ್ಲಿ ನಡೆದ ಹಲವಾರು ಕಾರ್ಯಕ್ರಮಗಳ ಬಗ್ಗೆ ಉಲ್ಲೇಖಿಸಿದರು. ಅದೇ ರೀತಿ ಶ್ರೀ ಗುರುಗಳ ಪ್ರೇರಣೆಯಂತೆ ಶೃಂಗೇರಿಯಲ್ಲಿ ಹಾಗೂ ಇತರ ಭಾಗಗಳಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಶ್ರೀ ಸಭಾವು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದೆಯೆಂದು ತಿಳಿಸಿದರು. ನಂತರ ಮಹಾಮಂಗಳಾರತಿ, ಪ್ರಸಾದ ವಿತರಣೆ ಹಾಗೂ ಪ್ರಸಾದಭೋಜನವನ್ನು ನೀಡಲಾಯಿತು. ಶ್ರೀಯುತ ಕರುಣಾರಾವ್ ಬೆಳ್ಳೆಯವರು ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ಪಿ.ಶ್ರೀಕಾಂತ ರಾವ್ ಸ್ವಾಗತಿಸಿ ವಂದಿಸಿದರು. ಕುಮಾರಿ ಐಶ್ವರ್ಯಲಕ್ಷ್ಮಿ ದೇವರ ಕೀರ್ತನೆಗಳನ್ನು ಸುಶ್ರಾವ್ಯವಾಗಿ ಹಾಡಿ ಶ್ರೀ ದೇವರ ಹಾಗೂ ಶ್ರೀ ಗುರುಗಳ ಕೃಪಾಶೀರ್ವಾದಕ್ಕೆ ಪಾತ್ರಳಾದಳು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸ್ವಾಮಿಗಳ ಕೃಪೆಗೆ ಪಾತ್ರರಾದರು.

-ಪಿ. ಶ್ರೀಕಾಂತರಾವ್

3ನೇ ಪುಟದಿಂದ

## ಉದ್ಘಾಟನಾ ಕಾರ್ಯಕ್ರಮ ದಿನಾಂಕ 12-05-2012ನೇ ಶನಿವಾರ

ಬೆಳಿಗ್ಗೆ 8ರಿಂದ : ನೋಂದಣಿ ಹಾಗೂ ಉಪಾಹಾರ
9-00ರಿಂದ : ಸಾಂಸ್ಕೃತಿಕ ಕಾರ್ಯಕ್ರಮಗಳು
10-30ರಿಂದ 11-00 : ಮೆರವಣಿಗೆಯೊಂದಿಗೆ ಅತಿಥಿಗಳ ಸ್ವಾಗತ

### ಸಭಾ ಕಾರ್ಯಕ್ರಮ

ಉದ್ಘಾಟನೆ : **ಪೂಜ್ಯ ಡಾ। ಡಿ.ವೀರೇಂದ್ರ ಹೆಗ್ಗಡೆ,**
ಧರ್ಮಾಧಿಕಾರಿ, ಶ್ರೀ ಕ್ಷೇತ್ರ ಧರ್ಮಸ್ಥಳ
ಅಧ್ಯಕ್ಷತೆ : **ಶ್ರೀ ಎಂ.ಆರ್.ವಾಸುದೇವ, ಮಂಗಳೂರು**
ಗೌರವಾಧ್ಯಕ್ಷರು, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ
ಶುಭಾಶಂಸನೆ : **ಶ್ರೀ ಎ.ಈಶ್ವರಯ್ಯ,** ಕಲಾವಿಮರ್ಶಕರು ಮತ್ತು ಲೇಖಕರು
ಪ್ರಧಾನ ಅಭ್ಯಾಗತರು : **ಶ್ರೀ ರಘುಪತಿ ಭಟ್,** ಶಾಸಕರು, ಉಡುಪಿ
**ಶ್ರೀ ಮನೋಹರ ಪ್ರಸಾದ್,**
ನ್ಯೂಸ್‌ಬ್ಯೂರೋ ಮುಖ್ಯಸ್ಥರು, ಉದಯವಾಣಿ, ಮಂಗಳೂರು
ದಿಕ್ಸೂಚಿ ಭಾಷಣ : **ಶ್ರೀ ರಾಮಮೋಹನ ರಾವ್, ಬೆಳ್ಳೆ**
ಅಧ್ಯಕ್ಷರು ಮತ್ತು ಆಡಳಿತ ನಿರ್ದೇಶಕರು, ಎಸ್.ಬಿ.ಐ.ಲೈಫ್, ಮುಂಬೈ
ಉಪಸ್ಥಿತಿ : **ಶ್ರೀ ಉಮೇಶ್ ಶ್ಯಾನುಭೋಗ್,**
ಅಧ್ಯಕ್ಷರು, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ
**ಶ್ರೀ ಸಿ.ಎಸ್.ರಾವ್,**
ಗೌರವ ಸಂಚಾಲಕರು, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ
ಮಧ್ಯಾಹ್ನ 1ರಿಂದ : **ಭೋಜನ**
ಮಧ್ಯಾಹ್ನ 2ರಿಂದ 3 : **ಶ್ರೀ ಗೋಪಾಲಕೃಷ್ಣ ಸಂಘ, ಕಾಸರಗೋಡು ಇವರಿಂದ ಯಕ್ಷಗಾನ ಗೊಂಬೆಯಾಟ**

**ವಿ.ಸೂ. : ಸಮಾಜ ಬಾಂಧವರಿಗೆ ನಿತ್ಯಾನುಷ್ಠಾನ, ಪೂಜೆ, ಜಪ, ಭಜನೆ ಮಾಡಲು ಅವಕಾಶವಿದೆ.**

**ಸಂಜೆ ಗಂಟೆ 3-00ರಿಂದ 4-30:ವಿಚಾರ ಸಂಕಿರಣ 1**

### ಸ್ಥಾನಿಕ ಬ್ರಾಹ್ಮಣರ ಆಡಳಿತದಲ್ಲಿರುವ ದೇವಸ್ಥಾನಗಳ ಪರಿಚಯ

ಗೋಷ್ಠಿಪತಿ : **ಶ್ರೀ ಕೆ.ಎನ್.ಜಗನ್ನಿವಾಸ ರಾವ್,** ನ್ಯಾಯವಾದಿಗಳು, ಪುತ್ತೂರು
ವಿಷಯ ಮಂಡಣೆ : **ಶ್ರೀ ಕಡಬ ಗೋಪಾಲ ರಾವ್,** ರಾಜ್ಯಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕರು
**ಶ್ರೀ ಕರುಣ್‌ರಾವ್ ಬೆಳ್ಳೆ,** ಸಾಮಾಜಿಕ ಕಾರ್ಯಕರ್ತರು
ಸಂಜೆ 4-30ರಿಂದ 5 : **ಸಾಂಸ್ಕೃತಿಕ ಕಾರ್ಯಕ್ರಮಗಳು**

**ಸಂಜೆ ಗಂಟೆ 5-00ರಿಂದ 6-30:ವಿಚಾರ ಸಂಕಿರಣ 2**

### ವೈದಿಕತನದ ಉಳಿವಿಗಾಗಿ ಕೈಗೊಳ್ಳಬೇಕಾದ ಕ್ರಮಗಳು

ಗೋಷ್ಠಿಪತಿ : **ವಾಚಸ್ಪತಿ ಶ್ರೀ ಕುರಯ ಆತ್ಮಾರಾಮ ಶಾಸ್ತ್ರೀ,** ಬೆಂಗಳೂರು
ವಿಷಯ ಮಂಡಣೆ : **ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿ ಉಡುಪಿ**
**ಶ್ರೀ ಭಾಸ್ಕರ ಶಾಸ್ತ್ರೀ,** ದೇಲಂಪಾಡಿತ್ತಾಯರು, ಶ್ರೀ ಕ್ಷೇತ್ರ ಧರ್ಮಸ್ಥಳ
ಸಂಜೆ 4-30ರಿಂದ 5 : **ಸಾಂಸ್ಕೃತಿಕ ಕಾರ್ಯಕ್ರಮಗಳು**
ರಾತ್ರಿ 7-30ರಿಂದ : **ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಉಡುಪಿ ಇವರಿಂದ ಯಕ್ಷಗಾನ-ಶಿವಪಂಚಾಕ್ಷರಿ ಮಹಿಮೆ**

## ದಿನಾಂಕ 13-05-2012ನೇ ಆದಿತ್ಯವಾರ

ಬೆಳಿಗ್ಗೆ 8ರಿಂದ 9 : ನೋಂದಣಿ ಹಾಗೂ ಉಪಾಹಾರ

**ಸಂಜೆ ಗಂಟೆ 9-00ರಿಂದ 10-30:ವಿಚಾರ ಸಂಕಿರಣ 3**

### ಸಮಾಜದ ಬೆಳವಣಿಗೆಗೆ ಸಂಘಗಳು ಕೈಗೊಳ್ಳಬೇಕಾದ ಕ್ರಮಗಳು

ಗೋಷ್ಠಿಪತಿ : **ಡಾ। ಶೈಲಜಾ ಶಾಸ್ತ್ರಿ,** ಮನೋರೋಗ ತಜ್ಞರು, ಬೆಂಗಳೂರು
ವಿಷಯ ಮಂಡಣೆ : **ಶ್ರೀ ವರದರಾಜ ಚಂದ್ರಗಿರಿ,** ಪ್ರಾಂಶುಪಾಲರು, ಬೆಟ್ಟಂಪಾಡಿ
**ಡಾ। ವೈ.ರವೀಂದ್ರನಾಥ ರಾವ್,** ಪ್ರಾಧ್ಯಾಪಕರು, ಬ್ರಹ್ಮಾವರ
ಬೆಳಿಗ್ಗೆ 10-30ರಿಂದ : **ಸಾಂಸ್ಕೃತಿಕ ಕಾರ್ಯಕ್ರಮಗಳು**

**ಬೆಳಿಗ್ಗೆ ಗಂಟೆ 11-00ರಿಂದ 12-30:ವಿಚಾರ ಸಂಕಿರಣ 4**

### ಸಮಾಜದಲ್ಲಿ ವೈವಾಹಿಕ ಸಂಬಂಧಿ ಸಮಸ್ಯೆಗಳು

ಗೋಷ್ಠಿಪತಿ : **ಶ್ರೀ ಅಜ್ಜಾವರ ಶಿವ ರಾವ್,** ಬೆಂಗಳೂರು
ವಿಷಯ ಮಂಡಣೆ : **ಶ್ರೀ ಬಿ.ಕೆ.ಧನಂಜಯ ರಾವ್,** ನ್ಯಾಯವಾದಿಗಳು, ಬೆಳ್ತಂಗಡಿ
**ಶ್ರೀಮತಿ ಸಾವಿತ್ರಿ ಮನೋಹರ್,**
ವಿಶ್ರಾಂತ ಮುಖ್ಯೋಪಾಧ್ಯಾಯಿನಿ, ಕಾರ್ಕಳ
ಮಧ್ಯಾಹ್ನ 12-30ರಿಂದ 1-00 : **ಸಾಂಸ್ಕೃತಿಕ ಕಾರ್ಯಕ್ರಮಗಳು**
ಮಧ್ಯಾಹ್ನ 1-00ರಿಂದ 2-00 : **ಭೋಜನ**
ಮಧ್ಯಾಹ್ನ 2-00ರಿಂದ 3-00 : **ಸಾಂಸ್ಕೃತಿಕ ಕಾರ್ಯಕ್ರಮಗಳು**
ಮಧ್ಯಾಹ್ನ 3-00ರಿಂದ 4-00 : **ಮುಕ್ತ ಚರ್ಚೆ**
ಮಧ್ಯಾಹ್ನ 4-00ರಿಂದ 4-30 : **ಸಾಂಸ್ಕೃತಿಕ ಕಾರ್ಯಕ್ರಮಗಳು**

### ಸನ್ಮಾನ ಹಾಗೂ ಸಮಾರೋಪ ಸಮಾರಂಭ

ಅಧ್ಯಕ್ಷರು : **ಶ್ರೀ ಎಂ.ಆರ್.ವಾಸುದೇವ, ಮಂಗಳೂರು**
ಗೌರವಾಧ್ಯಕ್ಷರು, ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ
ಪ್ರಧಾನ ಅಭ್ಯಾಗತರು : **ಶ್ರೀ ಜಯರಾಮ್ ಭಟ್,** ಅಧ್ಯಕ್ಷರು ಮತ್ತು ಆಡಳಿತ ನಿರ್ದೇಶಕರು
ಕರ್ನಾಟಕ ಬ್ಯಾಂಕ್, ಮಂಗಳೂರು
**ಶ್ರೀ ಪ್ರದೀಪ್ ರಾವ್,**
ಉಪವ್ಯವಸ್ಥಾಪಕ ನಿರ್ದೇಶಕರು, ಎಸ್.ಬಿ.ಐ., ಮುಂಬೈ
**ಶ್ರೀ ಸಂದೀಪ್ ಶಾಸ್ತ್ರಿ**
ಕುಲಪತಿಗಳು, ಜೈನ್ ವಿಶ್ವವಿದ್ಯಾಲಯ, ಬೆಂಗಳೂರು
**ಶ್ರೀ ಕೆ. ಪ್ರಭಾಕರ ರಾವ್**
ವ್ಯವಸ್ಥಾಪಕ ನಿರ್ದೇಶಕರು, ಎಂ.ಸಿ.ಎಫ್, ಮಂಗಳೂರು
ಸಮಾವೇಶದ ನಿರ್ಣಯಗಳ ಮಂಡನೆ : **ಶ್ರೀ ಎನ್.ಕೆ.ಜಗನ್ನಿವಾಸ ರಾವ್,** ಪುತ್ತೂರು
**ಡಾ। ವೈ. ಸುದರ್ಶನ ರಾವ್,** ಕುಕ್ಕಿಕಟ್ಟೆ
ಸಂಜೆ 6ರಿಂದ 7 : **ಸಾಂಸ್ಕೃತಿಕ ಕಾರ್ಯಕ್ರಮಗಳು**
ಸಂಜೆ 7-00ರಿಂದ : **ಸ್ಥಾನಿಕ ಬ್ರಾಹ್ಮಣ ಸಮಾಜದ ಕಲಾವಿದರಿಂದ**
**ತೆಂಕುತಿಟ್ಟು ಯಕ್ಷಗಾನ - ಕನಕಾಂಗಿ ಕಲ್ಯಾಣ**
ಸಂಯೋಜನೆ : **ಎಂ.ದೇವಾನಂದ ಭಟ್, ಬೆಳುವಾಯಿ**

## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶದ ಧ್ಯೇಯೋದ್ದೇಶಗಳು

★ ಸ್ಥಾನಿಕರ ಸ್ವಾಭಿಮಾನ ಜಾಗೃತಿ ಸಮಾವೇಶ ಹಾಗೂ ಸ್ಥಾನಿಕ ಸಮಾಜದ ಅಭಿವೃದ್ಧಿ ಕುರಿತಾಗಿ ಚಿಂತನ ಮಂಥನ ★ ಧಾರ್ಮಿಕ ಆಚರಣೆಗಳ ಮಹತ್ವದ ಬಗ್ಗೆ ಅರಿವನ್ನು ಮೂಡಿಸುವುದು ★ ಸ್ಥಾನಿಕರ ಸಾಮಾಜಿಕ ಹಿನ್ನಲೆ ಮತ್ತು ಚರಿತ್ರೆಯ ಕುರಿತು ಅರಿವು ಮೂಡಿಸುವುದು ★ ಸ್ಥಾನಿಕರ ಸಾಮಾಜಿಕ ಸ್ಥಾನಮಾನದ ಕುರಿತು ವಿವೇಚನೆ ★ ಸ್ಥಾನಿಕರ ಭಾಷಾ ವೈಶಿಷ್ಟ್ಯದ ಕುರಿತು ವಿವೇಚನೆ ★ ಗುರುಮಠದ ಸಂಬಂಧದ ಕುರಿತು ಜಾಗೃತಿ ಮೂಡಿಸುವುದು ★ ವಧೂ-ವರರ ಸಮಾವೇಶ/ಮಹಿಳಾ/ವೈದಿಕ ಮೊದಲಾದ ಸಮಾಜಮುಖಿ ಗೋಷ್ಠಿಗಳು ★ ಸ್ಥಾನಿಕರ ಸಾಂಸ್ಕೃತಿಕ ಆಯಾಮದ ಕುರಿತು ವಿಮರ್ಶೆ ಹಾಗೂ ವಿವಿಧ ಕ್ಷೇತ್ರಗಳ ಸಾಧಕರನ್ನು ಗೌರವಿಸುವುದು. ★ ವಿವಿಧ ಕ್ಷೇತ್ರಗಳ ಸಂಪನ್ಮೂಲ ವ್ಯಕ್ತಿಗಳಿಂದ ಬೋಧನಾತ್ಮಕ ಉಪನ್ಯಾಸಗಳು ★ ಸಾಂಸ್ಕೃತಿಕ ವೈಭವದ ಸಾಕ್ಷಾತ್ಕಾರ ಹಾಗೂ ಸಮಾಜದ ಸರ್ವರ ಸೌಹಾರ್ದ ಮಿಲನಕ್ಕಾಗಿ ವೇದಿಕೆ ನಿರ್ಮಾಣ

## ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಮಾವೇಶ ಸಮಿತಿ - 2012


**ಗೌರವಾಧ್ಯಕ್ಷರು** : ಶ್ರೀ ಎಂ. ಆರ್. ವಾಸುದೇವ, ಮಂಗಳೂರು
**ಅಧ್ಯಕ್ಷರು** : ಶ್ರೀ ಉಮೇಶ ಶ್ಯಾನುಭೋಗ್, ಕಿರಿಮಂಜೇಶ್ವರ
**ಗೌರವ ಸಂಚಾಲಕರು** : ಶ್ರೀ ಸಿ. ಎಸ್. ರಾವ್, ಚಿಟ್ಪಾಡಿ
**ವ್ಯವಸ್ಥಾಪಕ ಸಂಚಾಲಕರು** : ಶ್ರೀ ಕರುಣ್‌ರಾವ್ ಬೆಳ್ಳೆ, ಮಂಗಳೂರು
**ಸಂಚಾಲಕರು** : ಶ್ರೀ ಎನ್. ಕೆ. ಜಗನ್ನಿವಾಸ ರಾವ್, ಪುತ್ತೂರು
**ವಿಚಾರ ಗೋಷ್ಠಿಯ ಸಂಚಾಲಕರು** : ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
**ವಿಚಾರ ಗೋಷ್ಠಿಯ ಸಹಸಂಚಾಲಕರು** : ಶ್ರೀ ಸಂಪತ್ ಕುಮಾರ್, ಕುಂಭಾಶಿ
**ಉಪಾಧ್ಯಕ್ಷರುಗಳು** : ಸ್ಥಾನಿಕ ಬ್ರಾಹ್ಮಣ ಸಮಾಜದ ಎಲ್ಲಾ ಸಂಘ ಸಂಸ್ಥೆಗಳ ಹಾಲಿ ಅಧ್ಯಕ್ಷರುಗಳು/ಕಾರ್ಯದರ್ಶಿಗಳು
**ಪ್ರಧಾನಕಾರ್ಯದರ್ಶಿ** : ಶ್ರೀ ಪ್ರಫುಲ್ಲಚಂದ್ರ ರಾವ್, ಉಡುಪಿ
**ಕಾರ್ಯದರ್ಶಿ** : ಶ್ರೀ ಎಂ. ದೇವಾನಂದ ಭಟ್, ಬೆಳುವಾಯಿ
**ಲೆಕ್ಕಪತ್ರ ಪರಿಶೋಧಕರು** : ಶ್ರೀ ಗಣೇಶ ಹೆಬ್ಬಾರ್, ಉಡುಪಿ

**ಜೊತೆ ಕಾರ್ಯದರ್ಶಿಗಳು** : ಶ್ರೀ ಎಂ. ಕೆ. ದಿವಾಕರ ರಾವ್, ಪಡುಬಿದ್ರಿ
ಶ್ರೀ ಗಣೇಶ ರಾವ್, ಕುಂಭಾಶಿ
ಶ್ರೀಮತಿ ಉಷಾ ಎಲ್. ಶ್ಯಾನುಭೋಗ್, ಉಡುಪಿ
ಶ್ರೀ ಬಿ.ಎಸ್. ಅನಿಲ್ ರಾವ್, ಮಂಗಳೂರು
ಶ್ರೀ ಧನಂಜಯ ರಾವ್, ಬೆಳ್ತಂಗಡಿ
ಶ್ರೀ ಸುಧಾಕರ ರಾವ್, ಬೆಳ್ಳೆ
ಶ್ರೀಮತಿ ಶರಾವತಿ ರವಿರಾಜ್, ಎಲ್ಲೂರು
ಶ್ರೀ ಅರವಿಂದ ಕುಮಾರ್, ಮಣಿಪಾಲ
ಶ್ರೀ ಕೃಷ್ಣಕುಮಾರ್ ರಾವ್, ಮಟ್ಟು
ಶ್ರೀ ವಸಂತ ರಾವ್, ಕರಂಬಳ್ಳಿ
ಶ್ರೀ ಶಿವರಾವ್, ನಕ್ರೆ, ಕಾರ್ಕಳ
ಶ್ರೀ ರಾಘವೇಂದ್ರ ಹೆಬ್ಬಾರ್, ಮೂಡುಬಿದಿರೆ
**ಕೋಶಾಧಿಕಾರಿ** : ಶ್ರೀ ಮಾರ್ಪಳ್ಳಿ ಸದಾನಂದ ರಾವ್, ಉಡುಪಿ
**ಜೊತೆ ಕೋಶಾಧಿಕಾರಿ** : ಶ್ರೀ ವೇಣುಗೋಪಾಲ ರಾವ್, ಉಡುಪಿ

**ಪ್ರಚಾರ ಸಮಿತಿ ಸಂಚಾಲಕರು** : ಶ್ರೀ ಟಿ. ವಿಶ್ವನಾಥ ಶ್ಯಾನುಭೋಗ್, ಉಡುಪಿ ಮತ್ತು ಬಳಗ
**ಆರ್ಥಿಕ ಸಮಿತಿ ಸಂಚಾಲಕರು** : ಶ್ರೀ ಜಯರಾಮ ರಾವ್, ಉಡುಪಿ ಮತ್ತು ಬಳಗ
**ಊಟೋಪಚಾರ ಸಮಿತಿ ಸಂಚಾಲಕರು** : ಶ್ರೀ ಕೆ. ಮಂಜುನಾಥ ಹೆಬ್ಬಾರ್, ಉಡುಪಿ ಮತ್ತು ಬಳಗ
**ಅಲಂಕಾರ ಮತ್ತು ಸ್ವಚ್ಛತಾ ಸಮಿತಿ ಸಂಚಾಲಕರು** : ಶ್ರೀ ಅಜಿತ್ ರಾವ್, ಉಡುಪಿ ಮತ್ತು ಬಳಗ
**ಸಾಂಸ್ಕೃತಿಕ ಸಮಿತಿ ಸಂಚಾಲಕರು** : ಶ್ರೀ ಕೆ. ಸೀತಾರಾಮ ಹೆಬ್ಬಾರ್, ಕಬ್ಬಿನಾಲೆ ಮತ್ತು ಬಳಗ
**ವಧೂ-ವರರ ಸಮಾವೇಶ ಸಮಿತಿ ಸಂಚಾಲಕರು** : ಶ್ರೀ ಕೊಕ್ರಾಡಿ ಸುರೇಶ ರಾವ್, ಉಡುಪಿ ಮತ್ತು ಬಳಗ
**ವೇದಿಕೆ ಸಮಿತಿ ಸಂಚಾಲಕರು** : ಶ್ರೀ ವೈ. ಸುದರ್ಶನ ರಾವ್, ಅದಮಾರು ಮತ್ತು ಬಳಗ
**ಸ್ವಾಗತ ಸಮಿತಿ ಸಂಚಾಲಕರು** : ಶ್ರೀ ಪಿ.ಎಂ.ನಾಗರಾಜ ರಾವ್ ಹಿರಿಯಡ್ಕ ಮತ್ತು ಬಳಗ

**ವಿಶೇಷ ಸೂಚನೆ : ಸಮಾವೇಶದಲ್ಲಿ ಸಮಾಜ ಬಾಂಧವರಿಂದ ಸಂಗ್ರಹಿಸಲ್ಪಟ್ಟ ವಿವಿಧ ಆಕರ್ಷಕ ಕಲಾ ಪ್ರದರ್ಶನ ಮತ್ತು ಪುಸ್ತಕ ಮಳಿಗೆಗಳ ಪ್ರದರ್ಶನ-ಮಾರಾಟ ಇದೆ.**

# ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀಶಾರದಾ ಪೀಠದ ಕೊಡುಗೆ



- ಡಾ| ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಪ್ರಾಧ್ಯಾಪಕರು
ಕುಂದಾಪುರ-576 201.

(ಹಿಂದಿನ ಸಂಚಿಕೆಯಿಂದ)

ಶ್ರೀಮಠದ ಪ್ರವೇಶದಲ್ಲಿ ನಿರ್ಮಾಣಗೊಳ್ಳುತ್ತಿರುವ ಸುಮಾರು 127 ಅಡಿ ಎತ್ತರದ ಭವ್ಯವಾದ ರಾಜಗೋಪುರ, ಶ್ರೀಶಂಕರಾಚಾರ್ಯರ ಸುಂದರವಾದ ಶಿಲಾಮಯ ಪ್ರತಿಷ್ಠಾನ-ಹೀಗೆ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಅನೇಕ ಭವ್ಯವಾದ ಕಟ್ಟಡಗಳ ನಿರ್ಮಾಣ ಕಾರ್ಯ ಮುಕ್ತಾಯದ ಹಂತದಲ್ಲಿದೆ. ಈ ಒಂದೊಂದು ಕಟ್ಟಡವೂ ಧಾರ್ಮಿಕ ಮತ್ತು ಸಾಮಾಜಿಕ ನೆಲೆಯಲ್ಲಿ ಅತ್ಯಂತ ಮಹತ್ತ್ವದ್ದು.

ಶೃಂಗೇರಿ ಶ್ರೀಶಾರದಾಪೀಠ ಯಾವುದೇ ಪ್ರಚಾರದ ಹಂಬಲವಿಲ್ಲದೆ, ಸದ್ದು-ಗದ್ದಲ-ಆಡಂಬರಗಳಿಂದ ದೂರ ನಿಂತು ಮಾಡುತ್ತಿರುವ ಸಾಮಾಜಿಕ ಕಾರ್ಯಗಳು ನೂರಾರು. ಶೃಂಗೇರಿ ನಗರ ಮತ್ತು ತಾಲ್ಲೂಕಿನ ಎಲ್ಲ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಯನ್ನು ನಿರ್ವಹಿಸುತ್ತಿದೆ. ಕಾರ್ಗಿಲ್ ಯೋಧರ ನಿಧಿ, ಗುಜರಾತಿನ ಭೂಕಂಪ ನಿಧಿ ಮತ್ತು ಅನೇಕ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ತನ್ನ ಗಮನಾರ್ಹ ಮೊತ್ತದ ದೇಣಿಗೆಯನ್ನು ನೀಡಿದೆ. ಪ್ರತಿವರ್ಷ ಅಂಗವಿಕಲರಿಗೆ ಶ್ರವಣ ಸಾಧನ, ಚತುಶ್ಚಕ್ರವಾಹನ, ಆರ್ಥಿಕವಾಗಿ ಅಶಕ್ತರಾದವರಿಗೆ ಹೊಲಿಗೆ ಯಂತ್ರಗಳು, ಹೊದೆಯಲು ಕಂಬಳಿಗಳು, ಸೀರೆ-ಬಟ್ಟೆಗಳು ಇವನ್ನೆಲ್ಲ ಕೊಡಲಾಗುತ್ತಿದೆ. ದೇವಾಲಯಗಳ ಜೀರ್ಣೋದ್ಧಾರ, ಶಾಲೆ-ಕಾಲೇಜುಗಳ ಕಟ್ಟಡ ನಿರ್ಮಾಣ-ಇವಕ್ಕೆಲ್ಲ ಆರ್ಥಿಕ ನೆರವು, ವಿವಾಹ-ಉಪನಯನ, ಮಕ್ಕಳ ಶಿಕ್ಷಣ-ಇತ್ಯಾದಿಗಳಿಗೆ ಯಾರಾದರೂ ಅಶಕ್ತರು ಬಂದು ಅಪೇಕ್ಷಿಸಿದಾಗ ಶ್ರೀ ಶ್ರೀಗಳವರ ಅನುಗ್ರಹ ರೂಪದಲ್ಲಿ ಧನ ಸಹಾಯ-ಇವೆಲ್ಲ ಪ್ರತಿನಿತ್ಯ ಎಂಬಂತೆ ನಡೆಯುತ್ತಲೇ ಇರುತ್ತವೆ.


ದತ್ತಿ ಗ್ರಾಮಯೋಜನೆ, ಸ್ವಚ್ಛ ಗ್ರಾಮ ಯೋಜನೆ, ಅಶಕ್ತ ಶಿಶು ಸಂರಕ್ಷಣೆ-ಇವಕ್ಕೆಲ್ಲಾ ಕೋಟ್ಯಂತರ ರೂಪಾಯಿಗಳನ್ನು ವಿನಿಯೋಗಿಸಲಾಗುತ್ತಿದೆ. ಮಹಾಗಣಪತಿ ವಾಕ್ಯಾರ್ಥ ವಿದ್ವತ್ಸಭಾ, ಶಾಸ್ತ್ರಸಂವರ್ಧಿನೀ ಸಭಾ, ಶಾಸ್ತ್ರಪೋಷಕ ಸಭಾ, ವೇದಪೋಷಕ ಸಭಾ, ಇತ್ಯಾದಿಗಳ ಮೂಲಕ ಸಹಸ್ರಾರು ಮಂದಿ ವಿದ್ವಾಂಸರನ್ನು ಪ್ರೋತ್ಸಾಹಿಸಲಾಗುತ್ತಿರುವುದಲ್ಲದೆ, ವೇದ-ಶಾಸ್ತ್ರಗಳ ಬೆಳವಣಿಗೆಗೆ ಬೇಕಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ವರ್ಧಂತ್ಯುತ್ಸವದ ಸಂದರ್ಭದಲ್ಲಿ (2006) ಆರಂಭಿಸಲಾದ ಗೀತಾಜ್ಞಾನ ಯಜ್ಞದಲ್ಲಿ ಸುಮಾರು 1500ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದು, ಕಂಠಪಾಠ ಒಪ್ಪಿಸುವ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ತಲಾ ಇಪ್ಪತ್ತೊಂದು ಸಾವಿರ ರೂಪಾಯಿಗಳಂತೆ ಬಹುಮಾನ ಪಡೆದಿದ್ದಾರೆ. ಜಗದ್ಗುರುಗಳವರ ವಿಜಯಯಾತ್ರೆಯ ಸಂದರ್ಭದಲ್ಲೂ ಈ ಪರೀಕ್ಷೆಗಳು ನಡೆಯುತ್ತವೆ. ಮಹಿಳೆಯರು, ಮಕ್ಕಳು, ರೈತರು, ಜನಸಾಮಾನ್ಯರು - ಎಂಬ ಭೇದವಿಲ್ಲದೆ ಭಾಗವಹಿಸುವ ಈ ಮಹಾಯಜ್ಞದಲ್ಲಿ ಸುಮಾರು ಒಂದುವರೆ ಕೋಟಿ ರೂಪಾಯಿಗಳನ್ನು ಬಹುಮಾನಕ್ಕೋಸ್ಕರ ವಿನಿಯೋಗಿಸಲಾಗಿದೆ. ಶ್ರೀ ಶ್ರೀಗಳವರ ಅನುಗ್ರಹ ಮತ್ತು ಆಶೀರ್ವಾದ ಪಡೆದ ಈ ಬಹುಮಾನ ವಿಜೇತರಲ್ಲಿ ಅನೇಕರು ಇತರರಿಗೆ ಭಗವದ್ಗೀತೆ ಕಲಿಸುವ ಕಾಯಕದಲ್ಲಿ ನಿರತರಾಗಿದ್ದಾರೆ. 'ಭಗವನ್ನಾಮ ಯಜ್ಞ'ವೆಂಬ ಇಂತಹ ಮತ್ತೊಂದು ಯೋಜನೆಯಲ್ಲಿ ಆಸಕ್ತರು ಒಂದು ಲಕ್ಷ ಭಗವನ್ನಾಮಗಳನ್ನು ಬರೆದು ಒಪ್ಪಿಸಿ, ತಲಾ ಎರಡು ಸಾವಿರ ರೂಪಾಯಿಗಳ ಪುರಸ್ಕಾರ ಪಡೆಯುತ್ತಿದ್ದಾರೆ. ಆಸ್ತಿಕರಿಗೆಲ್ಲ ಅತ್ಯಂತ ಪ್ರಿಯವಾದ ಈ ಕಾರ್ಯಕ್ಕೆ ಲಕ್ಷಾಂತರ ರೂಪಾಯಿಗಳನ್ನು ವಿನಿಯೋಗಿಸಲಾಗುತ್ತಿದೆ. ಆಚಾರ್ಯ ಶಂಕರರ ಜನ್ಮಭೂಮಿಯಾದ ಕಾಲಟಿ ಕ್ಷೇತ್ರದಲ್ಲಿ 'ಶ್ರೀ ಶಂಕರಾಚಾರ್ಯ ಸಂಸ್ಕೃತ ವಿಶ್ವವಿದ್ಯಾಲಯ' ಮತ್ತು ಶೃಂಗೇರಿಯಲ್ಲಿ 'ಕೇಂದ್ರೀಯ ವಿದ್ಯಾಪೀಠ'ವನ್ನು ಸ್ಥಾಪಿಸಲು ಬೇಕಾದ ಮಾರ್ಗದರ್ಶನ ನೀಡಿ, ಅವುಗಳ ಮುನ್ನಡೆಗೆ ಬೇಕಾದ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಪೂರ್ಣಾನುಗ್ರಹದೊಂದಿಗೆ ಅಮೆರಿಕಾದ 'ಶೃಂಗೇರಿ ವಿದ್ಯಾಭಾರತೀ ಫೌಂಡೇಶನ್'ನವರು ಸ್ಟ್ರಾಸ್‌ಬರ್ಗ್ ಎಂಬಲ್ಲಿ ಶತ ಚಂಡಿಕಾಯಾಗ, ಗಣಪತಿ, ಮೃತ್ಯುಂಜಯ, ಲಲಿತಾ, ಶ್ರೀಸೂಕ್ತ, ಪುರುಷಸೂಕ್ತ ಮತ್ತು ಸುದರ್ಶನ ಹೋಮ ಇತ್ಯಾದಿಗಳನ್ನು ಆಗಾಗ ನಡೆಸುತ್ತಿದ್ದಾರೆ. ಇವೆಲ್ಲವೂ ಶೃಂಗೇರಿಯ ಪರಂಪರೆಗೆ ಅನುಗುಣವಾಗಿ ನಡೆಯುತ್ತಿದ್ದು, 'ಶೃಂಗೇರಿ ಸಾಧನಾ ಸೆಂಟರ್' ಮತ್ತು 'ಶೃಂಗೇರಿ ಶಾರದಾ ಸ್ಟಡಿ ಸೆಂಟರ್'-ಈ ಕುರಿತು ವಿಶೇಷ ಮುತುವರ್ಜಿ ವಹಿಸುತ್ತಿವೆ. 'ಶ್ರೀ ಭಾರತೀ ಲೈಬ್ರೆರಿ ಮತ್ತು ಸಮುದಾಯ ಭವನ'ಗಳಲ್ಲಿ ಆಗಾಗ ಅದ್ವೈತ ಕುರಿತಾದ ವಿಚಾರ ಗೋಷ್ಠಿಗಳು, ಶೃಂಗೇರಿ ಶ್ರೀ ಶಾರದಾ ಪೀಠದ ಕುರಿತು ವಿದೇಶೀಯರಲ್ಲಿ ಹೆಚ್ಚಿನ ಅರಿವು ಮೂಡಿಸುವ ಕಾರ್ಯಕ್ರಮಗಳು, ಸಾಧಕರಿಗೆ ಮಾರ್ಗದರ್ಶನ - ಇವೆಲ್ಲ ನಡೆಯುತ್ತಿದ್ದು ವಿದೇಶೀ ನೆಲದಲ್ಲಿ ಸನಾತನ ಧರ್ಮ ಚಿಗುರೊಡೆಯಲು ತೊಡಗಿದೆ. ಕೆನಡಾದ ಟೊರೊಂಟೋ ಎಂಬಲ್ಲಿ ಶೃಂಗೇರಿಯ ಶಾರದಾಂಬಾ ದೇವಾಲಯದ ಪ್ರತಿಕೃತಿಯಂತೆ ನಿರ್ಮಾಣಗೊಂಡ ಶಿಲಾಮಯ ಶಾರದಾಂಬಾ ದೇವಸ್ಥಾನ ಮತ್ತು ಅಮೆರಿಕಾದ ಸ್ಟ್ರಾಸ್‌ಬರ್ಗ್‌ನಲ್ಲಿರುವ ದೇವಾಲಯ ಸಂಕೀರ್ಣದ ಕುಂಭಾಭಿಷೇಕ, ಪ್ರತಿಷ್ಠಾ ವಿಧಿ-ವಿಧಾನಗಳನ್ನು ಜಗದ್ಗುರುಗಳವರ ಆದೇಶದಂತೆ ಶ್ರೀಮಠದ ಆಡಳಿತಾಧಿಕಾರಿ ಡಾ| ಗೌರೀಶಂಕರ್ ಅವರ ನೇತೃತ್ವದಲ್ಲಿ ತೆರಳಿದ ಶೃಂಗೇರಿ ಶ್ರೀ ಶಾರದಾಪೀಠದ ವೈದಿಕ ವೃಂದ ಶಾಸ್ತ್ರೋಕ್ತವಾಗಿ ನೆರವೇರಿಸಿದೆ. ಅಮೆರಿಕಾದ ಬಾಸ್ಟನ್‌ನಲ್ಲಿರುವ 'ದಿ ಫಿಲಾಸಫಿ ಫೌಂಡೇಶನ್' ಮತ್ತು ರೋಮ್ ಮತ್ತು ಇಟಲಿಯಲ್ಲಿನ 'ದಿ ಹರ್ಮಿಟೇಜ್ ಅದ್ವೈತಾಶ್ರಮಗಳು' ಶೃಂಗೇರಿಯ ಜಗದ್ಗುರು ಮಹಾಸಂಸ್ಥಾನದೊಂದಿಗೆ ನಿಕಟ ಸಂಪರ್ಕವನ್ನಿರಿಸಿಕೊಂಡು ಮಾರ್ಗದರ್ಶನ ಪಡೆಯುತ್ತಿದೆ.

ಹೀಗೆ ದಕ್ಷಿಣಾಮ್ನಾಯ ಶೃಂಗೇರಿ ಶ್ರೀಶಾರದಾ ಪೀಠವು ದೇಶದ ಅನೇಕ ಭಾಗಗಳಲ್ಲಿ ಮತ್ತು ಇತ್ತೀಚೆಗೆ ವಿದೇಶಗಳಲ್ಲೂ ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಸನಾತನ ಧರ್ಮದ ಸಂರಕ್ಷಣೆ ಮತ್ತು ಶಾಂಕರ ಸಿದ್ಧಾಂತದ ಪ್ರಸಾರಕ್ಕೆ ಬದ್ಧವಾಗಿ ಅದು ನಡೆಸುತ್ತಿರುವ ಈ ಎಲ್ಲಾ ಕಾರ್ಯಗಳು ಅತ್ಯಂತ ಉಪಯುಕ್ತ ಮತ್ತು ಅನುಕರಣೀಯ. (ಮುಗಿಯಿತು)

ಶ್ರದ್ಧಾಂಜಲಿ-ಕವನ

## ಅಪ್ಪ ನೀನಿಲ್ಲದಿಲ್ಲ



ತೊದಲು ನುಡಿಯ ಕಲಿಸಿದ ಮುದದಿ ಮೊದಲ ಹೆಜ್ಜೆ ಇರಿಸಿದ ಅಪ್ಪ ನೀನಿಲ್ಲ
ಇದಿರಿಲ್ಲದೆ ಹೋರಾಡಿ ಜೀವನವನೆ ಎದುರಿಸಿ ಚಿರನಿದ್ರೆಗೆ ಜಾರಿದ ಅಪ್ಪ ನೀನಿಲ್ಲ ||


ಬಾಲ್ಯದ ಬುತ್ತಿಯ ತುಂಬಾ ತುಂಬಿಸಿದೆ ಬಗೆ ಬಗೆ ನೆನಪಿನ ಖಾದ್ಯ
ಅರಗಿಲ್ಲ ಕರಗಿಲ್ಲ ಮೆಲ್ಲುತ್ತಿದೆ ಇಂದಿಗೂ ಮನವಿದು ಬಲು ಚೋದ್ಯ
ನಿನ್ನ ಮದ್ದಳೆಯ ಹೊಡೆತಕ್ಕೆ ನನ್ನ ಹುಚ್ಚು ಕುಣಿತವಿನ್ನೂ ಹಸಿರು
ನಿನ್ನ ಹಾರ್ಮೋನಿಯಂ ನುಡಿತಕ್ಕೆ ನನ್ನ ಸಂಗೀತ ಮರೆತಿಲ್ಲ ಈ ಉಸಿರು || ೧ ||

ತುಸು ಮುನಿಸು ತುಸು ಕನಸು ಮನೆ ತುಂಬಾ ಹಾಸ್ಯದ ಹೊನಲು
ಪ್ರೀತಿ ಮಳೆ ಮಕ್ಕಳೆಲ್ಲರ ಮೇಲೆ, ಹರಿಸಿದೆ ಅಕ್ಕರೆಯ ಕಾರ್ಮುಗಿಲು
ಅಮ್ಮನೊಂದಿಗೆ ಸೇರಿ ಎಳೆದೆ ತೇರ ನೀನು, ಮೂರು ಉತ್ಸವಮೂರ್ತಿ
ತೇರು ಗುರಿ ತಲುಪಿರಲು, ಎದ್ದು ಹೊರಟೆಯಾ ನೀನು ಆಚರಿಸಲು ನಿತ್ಯ ಶಿವರಾತ್ರಿ || ೨ ||

ಅಪ್ಪ ನೀನಿರುವೆ ಮನದ ಆಗಸದ ಮಿನುಗು ನಕ್ಷತ್ರದಲ್ಲಿ
ಅಪ್ಪ ನೀನಿರುವೆ ಸರಳತೆ-ನಿಸ್ವಾರ್ಥತೆ-ಭಕ್ತಿ ಎಂಬ ಮೂರು ಮಂತ್ರದಲ್ಲಿ
ಅಪ್ಪ ನೀನಿರುವೆ ಪ್ರತಿ ಆಶೀರ್ವಾದದ ಮೊದಲ ಸಾಲಿನಲ್ಲಿ
ಅಪ್ಪ ನೀನಿರುವೆ ಅಮ್ಮನೊಂದಿಗೆ ಮಕ್ಕಳನು ಬಂಧಿಸಿದ ಪ್ರೀತಿ ಬಾಳಿನಲ್ಲಿ || ೩ ||

-ಡಾ| ಅಪರ್ಣ ಸುರೇಂದ್ರ, ಮೈಸೂರು
(ದಿ| ಕೆ.ಹರಿಹರ ಶರ್ಮರ ಪುತ್ರಿ)

## ಪುಣ್ಯಸ್ಮರಣೆ





15-07-1926 01-04-2010

ಕೇದಿಗೆ ಭಾಸ್ಕರ ರಾವ್

ನಮ್ಮೆಲ್ಲರನ್ನು ಪ್ರೀತಿ ವಾತ್ಸಲ್ಯದಿಂದ ಸಲಹಿ ಉತ್ತಮ ಮಾರ್ಗದರ್ಶನಗೈದ
ನಿಮ್ಮ ನೆನಪು ಸದಾ ಹಸಿರು.

ಲಕ್ಷ್ಮೀ ಭಾಸ್ಕರ ರಾವ್ (ಪತ್ನಿ)
ಗಾಯತ್ರಿ ಮತ್ತು ಡಾ. ಕೇದಿಗೆ ಅರವಿಂದ ರಾವ್
ರೂಪ ರಾಣಿ ಮತ್ತು ಕೇದಿಗೆ ವಸಂತ ರಾವ್
ರೇಖಾ ಮತ್ತು ಕೆ. ಜಯಂತ್ ರಾವ್
ರೇಖಾ ಮತ್ತು ರಾಜೇಂದ್ರ ಕೇದಿಗೆ
ಜ್ಯೋತಿ ಮತ್ತು ಕೆ. ಪ್ರತಾಪ್ ರಾವ್
ಗಾಯತ್ರಿ ಮತ್ತು ಸುಂದರೇಶ್ ಶರ್ಮ, ಬೆಂಗಳೂರು
ಕಮಲಜ ಮತ್ತು ರಾಜಶೇಖರ್, ಮೈಸೂರು
ಶಕುಂತಳ ಮತ್ತು ಡಾ. ಯಾಜಿ. ನಿರಂಜನ್ ಹೆಚ್. ಉಡುಪಿ
ರಾಜೇಶ್ವರಿ ಮತ್ತು ರಮಾನಂದ ರಾವ್, ಕುಡುಪು
ಮೊಮ್ಮಕ್ಕಳು ಮತ್ತು ಮರಿಮಕ್ಕಳು

Krishna Rao
Ph :2520652
Mob. :9902029048
KISHAN
Studio & Video


Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.



RAJESH POWER PRESS
PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph :(08251) 231696, 231697 & 322386
E-mail :msraghunathrao@hotmail.com
QUALITY FIRST AND ALWAYS

# ಅಗ್ರ ಪಂಕ್ತಿಯಲ್ಲಿ ಸ್ಥಾನಿಕ ಬ್ರಾಹ್ಮಣರು



-ಸಿ.ಎಸ್.ರಾವ್
ವಿಶ್ರಾಂತ ಡಿ.ಜಿ.ಎಮ್.,
ಕಾರ್ಪೋರೇಶನ್ ಬ್ಯಾಂಕ್

ನಮ್ಮನ್ನು ಯಾಕೆ ಸ್ಥಾನಿಕ ಬ್ರಾಹ್ಮಣರೆಂದು ಕರೆಯುತಾರೆ? ಸ್ಥಾನಿಕ ಎಂದರೆ ಸ್ಥಳೀಯ ಎಂದು ಅರ್ಥವೇ? ನಮಗೆ ದೇವಸ್ಥಾನದಲ್ಲಿ ಹಿಂದೆ ಯಾಕೆ ಅಡ್ಡ ಪಂಕ್ತಿ ಹಾಕುತಿದ್ದರು? ಇದನ್ನು ತಿಳಿಯುವ ಉದ್ದೇಶದಿಂದ ಡಾ। ಪಾದೂರು ಗುರುರಾಜ ಭಟ್ಟರು ಬರೆದ 'ತುಳುನಾಡು' ಎನ್ನುವ ಪುಸಕವನ್ನು ಮತ್ತು ಹಲವಾರು ಇತರ ಪುಸಕವನ್ನು ಓದಿದೆ. ಪಾದೂರು ಗುರುರಾಜ ಭಟ್ಟರು ಪಾದೂರು ತಂತ್ರಿಗಳ ಕುಟುಂಬದಿಂದ ಬಂದಿದು ಇವರ ಕುಟುಂಬಸ್ಥರು ಹೆಚ್ಚಿನ ದೇವಸ್ಥಾನಗಳ ಮತ್ತು ಉಡುಪಿ ಮಠಗಳ ತಂತ್ರಿಗಳಾಗಿದ್ದರು. ಅವರು ಅವರ ಪುಸ್ತಕದ ಮೊದಲ ಮಾತಿನಲ್ಲಿ ಹೇಳಿದಂತೆ ಅವರಿಗೂ ಸ್ಥಾನಿಕರು ಎಲ್ಲ ರೀತಿಯಲ್ಲೂ ಬ್ರಾಹ್ಮಣರಾಗಿದ್ದರೂ ಯಾಕೆ ಅಡ್ಡಪಂಕ್ತಿ ಹಾಕುತ್ತಿದ್ದಾರೆ ಎನ್ನುವ ಕುತೂಹಲ ವಿದ್ದುದರಿಂದ ಮುಂದೆ ಪಿ.ಎಚ್.ಡಿ. ಮಾಡುವಾಗ ದೇವಸ್ಥಾನದ ಬಗ್ಗೆ, ಅದರ ಶಾಸನ ಮತ್ತು ತುಳುನಾಡಿನಲ್ಲಿ ಬ್ರಾಹ್ಮಣ್ಯದ ಬಗ್ಗೆ ಶೋಧನೆ ಮಾಡುವ ಕೆಲಸವನ್ನು ಆರಿಸಿಕೊಂಡರು. ಅವರು ನೂರಕ್ಕೂ ಮಿಕ್ಕಿ ದೇವಸ್ಥಾನಗಳ ಶಾಸನವನ್ನು ಆಳವಾಗಿ ಪರಿಶೀಲಿಸಿದ್ದಾರೆ ಮತ್ತು ಅದರ ಬಗ್ಗೆ ಬರೆದಿದ್ದಾರೆ. ಅವರ ಪ್ರಕಾರ ಸ್ಥಾನಿಕ ಬ್ರಾಹ್ಮಣರು ದೇವಸ್ಥಾನದ ಮೇಲ್ವಿಚಾರಕರಾಗಿ, ಅರ್ಚಕರಾಗಿ, ಒಡೆಯರಾಗಿ ಒಂದು ವಿಶಿಷ್ಟ ವಾದ ಸ್ಥಾನವನ್ನು ಸಮಾಜದಲ್ಲಿ ಪಡೆದ ಬ್ರಾಹ್ಮಣ ವರ್ಗ. ಅವರು ಇದರ ಬಗ್ಗೆ ಬರೆದು 50 ವರ್ಷಗಳೇ ಕಳೆದರೂ ಅವರು ಬರೆದದ್ದನ್ನು ತಪ್ಪು ಎಂದು ಯಾರೂ ರುಜುವಾತು ಮಾಡಲಿಲ್ಲ. ಎಲ್ಲರೂ ಅವರ ಪುಸ್ತಕವನ್ನು ತಮ್ಮ ಮುಂದಿನ ಅಧ್ಯಯನಕ್ಕೆ, ಸಂಶೋಧನೆಗೆ ಒಂದು ಆಧಾರ ಗ್ರಂಥವಾಗಿ ಬಳಸಿದ್ದಾರೆ.

ಅವರ ಈ ಗ್ರಂಥದ ಪ್ರಕಾರ ನಾವು ಸ್ಥಾನಿಕ ಬ್ರಾಹ್ಮಣರು ದಕ್ಷಿಣಕ್ಕೆ ವಲಸೆ ಬಂದ ಮೊದಲ ಬ್ರಾಹ್ಮಣರು. ಅವರ ಊಹೆಯ ಪ್ರಕಾರ ಚಂದ್ರಗುಪ್ತ, ಚಾಣಕ್ಯರ ಕಾಲದಲ್ಲಿ ಅವರ ರಾಜ್ಯದ ದಕ್ಷಿಣ ಭಾಗದ ಗ್ರಾಮದ ಅಧಿ ಕಾರಿಯಾಗಿ ನಾವು ಬಂದವರು. ಆಗ ಆ ಗ್ರಾಮದ ದೇವಸ್ಥಾನವೇ ಗ್ರಾಮ ಆಡಳಿತದ ಮುಖ್ಯ ಕೇಂದ್ರವಾಗಿತ್ತು. ಗ್ರಾಮ ಆಡಳಿತ, ಕಂದಾಯ ವಸೂಲಿ, ನ್ಯಾಯ ತೀರ್ಮಾನ ಎಲ್ಲಾ ದೇವಸ್ಥಾನದಲ್ಲಿಯೇ ಆಗುತಿತು. ನಾವು ಆ ದೇವಸ್ಥಾನದ ಪೂಜೆಯವರಾಗಿ, ದೇವಸ್ಥಾನದ ಮೊಕ್ತೇಸರರಾಗಿ, ಗ್ರಾಮದ ಶಾನುಭೋಗ, ವಕೀಲರಾಗಿ ಕೆಲಸ ಮಾಡಿ-ರಾಜ, ಸಾಮಂತರೊಂದಿಗೆ ನೇರ ಸಂಪರ್ಕವನ್ನು ಹೊಂದಿದ್ದೆವು. ಕೆಲವರು ರಾಜ/ಸಾಮಂತರ ಖಜಾನೆಯ/ಬೊಕ್ಕಸದ ಮುಖ್ಯಸ್ಥರಾಗಿಯೂ, ದಿವಾನರಾಗಿಯೂ ಇದ್ದೆವು. ಬ್ರಾಹ್ಮಣರಾಗಿ ದೇವಸ್ಥಾನದ ಮುಖ್ಯಸ್ಥರಾಗಿದ್ದುದರಿಂದ ನಮ್ಮನ್ನು ಸ್ಥಾನಿಕ, ಸ್ಥಾನಾಧಿಪತಿ, ಸ್ಥಾನಾಧೀಶ ಬ್ರಾಹ್ಮಣರೆಂದು ಕರೆಯುತಿದ್ದರು. ನಾವು ಈ ಕರಾವಳಿ ಪ್ರದೇಶಕ್ಕೆ ಬಂದವರು ಇಲ್ಲಿಯ ಜನರೊಂದಿಗೆ ಹೊಂದಿ ಕೊಂಡು ಅವರ ತುಳುವಿನೊಂದಿಗೆ ನಮ್ಮ ಸಂಸ್ಕೃತವನ್ನು ಬೆರೆಸಿ ಬ್ರಾಹ್ಮಣ ತುಳುವನ್ನು ಪ್ರಾರಂಭಿಸಿದೆವು.

ನಾವು ಉತರ ಭಾರತದಿಂದ ಬಂದ ಋಗ್ವೇದಿಗಳೂ, ಸ್ಮಾರ್ತ ಬ್ರಾಹ್ಮಣರೂ ವಿಶಾಲ ಮನೋಭಾವದವರೂ ಆಗಿದ್ದು, ಶಿವ, ದುರ್ಗೆ, ಗಣಪತಿ, ಸ್ಕಂದ, ವಿಷ್ಣು, ರಾಮ, ಕೃಷ್ಣ ಹೀಗೆ ಎಲ್ಲಾ ದೇವರನ್ನು ಆರಾಧಿ ಸುತಿದ್ದೆವು. ಇಲ್ಲಿಯ ಜನರೊಂದಿಗೆ ಬೆರೆತು ಅವರ ಸಂಸ್ಕೃತಿಯಾಗಿದ್ದ ಭೂತಾರಾಧನೆ, ನಾಗ ಆರಾಧನೆಯಲ್ಲಿ ಭಾಗಿಯಾಗಿದ್ದೆವು. ಭೂತಾ ರಾಧನೆಯನ್ನು ನಾವು ನಮ್ಮ ಸಂಸ್ಕೃತಿಯಲ್ಲಿ ಬೆಳೆಸಿಕೊಂಡಷ್ಟು ಆಮೇಲೆ ಬಂದ ಬ್ರಾಹ್ಮಣರು ಬೆಳೆಸಿಕೊಳ್ಳಲಿಲ್ಲ. ನಾವು ದೇವಸ್ಥಾನದ ಮುಖ್ಯಸ್ಥರಾಗಿದ್ದುದರಿಂದ ರಾಜರು, ಸಾಮಂತರು ದೇವರ ಪೂಜೆಯ ಖರ್ಚಿಗೆ ಬಿಟ್ಟ ಉಂಬಳಿ, ಆಸಿಪಾಸಿಗಳನ್ನೆಲ್ಲಾ ಆ ದೇವಸ್ಥಾನದ ಸ್ಥಾನಿಕ ಬ್ರಾಹ್ಮಣರ ಹೆಸರಿನಲ್ಲಿ ಮಾಡಿದ್ದರು. ಹಾಗಾಗಿ ಪ್ರತಿ ದೇವಸ್ಥಾನದ ಹತ್ತಿರ ನಮ್ಮ ಮನೆ ಇದ್ದು ನಾವೆಲ್ಲರೂ ಆಸಿವಂತರಾಗಿದ್ದೆವು. ನಮ್ಮ ಗದ್ದೆಯಲ್ಲಿ ಬೆಳೆದ ಅಕ್ಕಿಯ ಅನ್ನವನ್ನು ದೇವರಿಗೆ ನೈವೇದ್ಯವಾಗಿಟ್ಟು ನಾವು ಅದನ್ನು ಪ್ರಸಾದವಾಗಿ ಸ್ವೀಕರಿಸುತ್ತಿದ್ದೆವು.

ಬ್ರಾಹ್ಮಣರ 2ನೇ ಸಲಸೆ ಬಂದದ್ದು ಹೆಚ್ಚು ಕಡಿಮೆ 8ನೇ ಶತಮಾನದಲ್ಲಿ. ಆಂಧ್ರಪ್ರದೇಶದ ಅಗ್ರಹಾರದಿಂದ ಕದಂಬ ರಾಜರ ಕಾಲದಲ್ಲಿ ಯಜ್ಞ, ಯಾಗಾದಿ ಮಾಡಲು ಇವರನ್ನು ಕರೆದುಕೊಂಡು ಬಂದದ್ದು ಎಂದು ಅಭಿಪ್ರಾಯ. ಇವರು ಯಜುರ್ವೇದಿಗಳು ಮತ್ತು ಶೈವರು. ಇವರು ಆಗಿನ ಹೈಗ (ಈಗಿನ ಗೋಕರ್ಣ)ಹಾಗೂ ಉತರಕನ್ನಡದಲ್ಲಿ ಬಂದು ನೆಲೆಸಿದರು. ಅವರು ಮೂಲಭಾಷೆಯನ್ನು ಇಲ್ಲಿಯ ಕನ್ನಡದೊಂದಿಗೆ ಸೇರಿಸಿ ಅವರದ್ದೇ ಕನ್ನಡ ಭಾಷೆಯಲ್ಲಿ ಮಾತನಾಡುತ್ತಾರೆ. ಇವರನ್ನು ಹವ್ಯಕರೆಂದು ಗುರುತಿಸಿದ್ದಾರೆ.

ಬ್ರಾಹ್ಮಣರ 3ನೇ ವಲಸೆ ಕರಾವಳಿ ಜಿಲ್ಲೆಗೆ ಬಂದದ್ದು ಹೆಚ್ಚು ಕಡಿಮೆ 11ನೇ ಶತಮಾನದಲ್ಲಿ. ಇವರು ಒಂದೇ ತಂಡವಾಗಿ ಬಾರದೆ ಬೇರೆ ಬೇರೆ ತಂಡವಾಗಿ ಬಂದು ಶಿವನಹಳ್ಳಿ, ಕೋಟ, ಕೋಟೇಶ್ವರ, ಕಂದಹಾರ ಇತ್ಯಾದಿ ಬೇರೆ ಬೇರೆ ಭಾಗದಲ್ಲಿ ನೆಲೆ ನಿಂತರು. ಅವರು ನೆಲೆ ನಿಂತ ಜಾಗವನ್ನೇ ಅವರನ್ನು ಗುರುತಿಸಿಕೊಳ್ಳಲು ಉಪಯೋಗಿಸಿದರು. ಇವರು ಬೇರೆ ಬೇರೆ ತಂಡವಾಗಿ ಬೇರೆ ಬೇರೆ ಜಾಗದಿಂದ ಬಂದವ ರಾದುದರಿಂದ ಅವರಲ್ಲಿ ಬೇರೆ ಬೇರೆ ವೇದಿಗಳು, ಮತ್ತು ಶೈವರು, ಸ್ಮಾರ್ತರು, ಭಾಗವತ ಪಂಥದವರು ಇದ್ದಾರೆ. 3ನೇ ವಲಸೆಯಲ್ಲಿ ಹೆಚ್ಚಾಗಿ ಮೈಸೂರು, ಶಿವಮೊಗ್ಗ ಕಡೆಯಿಂದ ಬಂದವರಾಗಿದ್ದು ಅವರು ಎಲ್ಲಿಂದ ಬಂದವರು ಎಂದು ಹೇಳಿಕೊಳ್ಳದೆ ಇಲ್ಲಿನ ಊರಿನ ಹೆಸರನ್ನು ಹಾಕಿಕೊಂಡರು. ಆ ಸಮಯದಲ್ಲಿ ಚೋಳರಿಗೂ ಚಾಲುಕ್ಯರಿಗೂ ಆಗಾಗ್ಗೆ ಕರ್ನಾಟಕದ ಬೇರೆ ಬೇರೆ ಭಾಗದಲ್ಲಿ ಯುದ್ಧವಾಗುತಿದ್ದು ಚೋಳರು ಬ್ರಾಹ್ಮಣ ವಿರೋಧಿಯಾಗಿದ್ದರಿಂದ ಕರಾವಳಿ ಪ್ರದೇಶ ಚಾಲುಕ್ಯರ ಮಿತ್ರರಾದ ಕದಂಬ ರಾಜರು ಮತ್ತು ಅವರ ಸಾಮಂತರಿಂದ ರಕ್ಷಿತ ಪ್ರದೇಶ ವಾದುದರಿಂದ ಇಲ್ಲಿಗೆ ವಲಸೆ ಬಂದಿರಬಹುದು ಎಂದು ಗುರುರಾಜ ಭಟ್ಟರ ಅಭಿಪ್ರಾಯ. ಹೀಗೆ 3ನೇ ವಲಸೆ ಬಂದವರು ಹೆಂಡತಿ ಮಕ್ಕಳನ್ನು ಬಿಟ್ಟು ಬಂದುದರಿಂದ ಅಥವಾ ಮದುವೆ ಆಗದಿದ್ದವರು ಬಂದುದರಿಂದ ಮುಂದೆ ಇಲ್ಲಿಯ ಇತರ ಜನರನ್ನು ಮದುವೆಯಾಗಿ, ಇತರ ಜಾತಿಯವರನ್ನು ಬ್ರಾಹ್ಮಣರನ್ನಾಗಿಸಿ ತಮ್ಮ ಜನ ಸಂಖ್ಯೆಯನ್ನು ಜಾಸ್ತಿ ಮಾಡಿಕೊಂಡರು ಎಂದು ಗುರುರಾಜ ಭಟ್ಟರ ಅಭಿಪ್ರಾಯ.

ಇದಕ್ಕೆ ಅವರು ಕೊಟ್ಟ ಉದಾಹರಣೆಗಳು ಹೀಗಿವೆ :- 1) ಬ್ರಾಹ್ಮಣರ ಜನಸಂಖ್ಯೆ ನಮ್ಮ ದೇಶದ ಯಾವ ಭಾಗದಲ್ಲಿಯಾದರೂ ಒಟ್ಟು ಜನಸಂಖ್ಯೆಯ 2% ಅಥವಾ 3%ಗಿಂತ ಜಾಸ್ತಿ ಇಲ್ಲ. ಆದರೆ ಕರಾವಳಿಯ ಈ ಪ್ರದೇಶದಲ್ಲಿ 10%ದಿಂದ 12% ತನಕವಿದೆ. ಇದು ಇತರ ಜಾತಿಯವರನ್ನು ಬ್ರಾಹ್ಮಣರಾಗಿ ಮಾಡಿದ್ದರಿಂದ ಮಾತ್ರ ಸಾಧ್ಯ. 2) ಇನ್ನೊಂದು ತಲೆಬುರುಡೆ ಪರಿಮಾಣಕ್ಕೆ (cepholic Index) ಅನುಗುಣ ವಾಗಿ ಕೆಲವು ನಿರ್ದಿಷ್ಟ ಸೆಂಟಿಮೀಟರನ್ನು ಹೊಂದಿರುತ್ತದೆ. ಆದರೆ ಅದು ಅಂತರ ಜಾತಿ ವಿವಾಹವಾದಾಗ 80 ಸೆಂ.ಮಿ.ಗಿಂತಲೂ ಜಾಸ್ತಿಯಾಗಿರುತದೆ. 3ನೇ ಸಲ ವಲಸೆ ಬಂದು ನೆಲೆ ನಿಂತ ತುಳು ಬ್ರಾಹ್ಮಣರಲ್ಲಿ ಈ ಪ್ರಮಾಣ 80 ಸೆಂ.ಮೀ.ಗಿಂತಲೂ ಜಾಸ್ತಿ ಇದೆ. 3) ಕೆಲವು ಬ್ರಾಹ್ಮಣರಲ್ಲಿರುವ ಅಡ್ಡ ಹೆಸರು-ಪಾಂಗಾಳ ಣ್ಣಾಯ್ಯ, ಬಾಗಿಲತ್ತಾಯ ಇತ್ಯಾದಿ. ಇದು ಇಲ್ಲಿಯ ಇತರ ಜಾತಿಯ ಹೆಂಗಸರಲ್ಲಿ ಬಳಸುವ 'ಬಲಿ'ಗೆ ಹೋಲುತ್ತದೆ. 4) ಇವರು ಮಾತನಾಡುವ ಬ್ರಾಹ್ಮಣ ತುಳುವಿನಲ್ಲಿ ಶೂದ್ರ ತುಳುವಿನ ಅಂಶ ಜಾಸ್ತಿ ಇದೆ. ಅದು ಏನೇ ಇರಲಿ ಈ 3ನೇ ವಲಸೆ ಬಂದವರು ಅವರ ಜೀವನವ್ಯಾಪ್ತಿಗಾಗಿ ನಮ್ಮಲ್ಲಿದ್ದ ದೇವಸ್ಥಾನಗಳ ಪೂಜಾ ಕಾರ್ಯ ಕೈಗೊಂಡು ನಮಗೆ ಸಹಾಯ ಮಾಡಿದರು. ಹೀಗೆ ನಮಗೆ ಸಹಾಯಕ್ಕೆ ಬಂದವರು ಊರಿನಲ್ಲಿ ಜನಾನುರಾಗಿ ಗಳಾದರು.

ಆಗ ಗ್ರಾಮದ ಪ್ರಥಮ ಬ್ರಾಹ್ಮಣರಾಗಿ (ಈಗಿನ ಗ್ರಾಮದ ಪ್ರಥಮ ಪ್ರಜೆ) ದೇವಸ್ಥಾನದ ಮೊಕ್ತೇಸರರಾಗಿದ್ದ ನಮಗೆ ಇದ್ದುದು ''ಅಗ್ರಪಂಕ್ತಿ''. ಈಗಿನ ಸಭಾ ಕಾರ್ಯಕ್ರಮದಲ್ಲಿ ಮುಖ್ಯಸ್ಥರನ್ನು ಸಭೆಯಲ್ಲಿ ವೇದಿಕೆಯ ಮೇಲೆ ಅಗ್ರಪಂಕ್ತಿಯಲ್ಲಿ ಕುಳ್ಳಿರಿಸಿದ ಹಾಗೆ ಆ ಸಂದರ್ಭದಲ್ಲಿ ನಮಗೆ ಪೂಜೆಗೆ ಜನ ಸಿಕ್ಕಿದುದರಿಂದ ನಾವು ವೇದ, ಅಧ್ಯಯನ ಪೂಜೆಯನ್ನು ಅವರಿಗೆ ಬಿಟ್ಟು ಆಡಳಿತವನ್ನು ಮಾತ್ರಾ ನೋಡುತ್ತಿದ್ದೆವು. ಆಸ್ತಿಯನ್ನು ಗೇಣಿಗೆ ಕೊಟ್ಟು ವಿಲಾಸಿ ಜೀವನವನ್ನು ನಡೆಸುತ್ತಿದ್ದೆವು. ಇಲ್ಲಿಂದ ಮುಂದೆ ಅಂದರೆ ಹೆಚ್ಚು ಕಡಿಮೆ 16ನೇ ಶತಮಾನದಿಂದ ನಮ್ಮ ಸಮಾಜದ ಅವನತಿಯ ಶಖೆ ಪ್ರಾರಂಭವಾಗುತ್ತದೆ.

ದೇವಸ್ಥಾನದ ಪೂಜೆಗಿದ್ದವರು ಊರಿನ ಜನ, ಅವರ ಸಮಾಜದ ಬಲ, ಮಠದ ಬಲದಿಂದ ಮುಂದೆ ಒಂದೊಂದೇ ದೇವಸ್ಥಾನದ ಆಡಳಿತವನ್ನು ಹೊಂದಿದಾಗ ನಾವು ಹೊರಗೆ ಬಂದೆವು. 11ನೇ ಶತಮಾನದಲ್ಲಿ ವಲಸೆ ಬಂದ 3ನೇ ತಂಡದ ಬ್ರಾಹ್ಮಣರು 15-16ನೇ ಶತಮಾನದಲ್ಲಿ ಆಗಿನ ಸ್ವಾಮೀಜಿಯವರಿಗೆ ಇದ್ದ ಸಾಮಂತರಾಜರ ಬಲದಿಂದ ಎಷ್ಟು ತುಚ್ಛೀಕರಿಸಲು ಸಾಧ್ಯವೋ ಅಷ್ಟೂ ಪ್ರಯತ್ನ ಮಾಡಿ ನಮ್ಮ ಅಧಃಪತನಕ್ಕೆ ಕಾರಣರಾದರು. ಒಂದನೇ ಶತಮಾನದ ಆರಂಭದಲ್ಲಿ ಬರೆದಿದ್ದ ಸ್ಕಂದ ಪುರಾಣಕ್ಕೆ 15ನೇ ಶತಮಾನದಲ್ಲಿ ಸ್ಕಂದ ಪುರಾಣ ಅಂತರ್ಗತ ಶಹ್ಯಾದ್ರಿಖಂಡ ಎಂಬ ಹೊಸ ಅಧ್ಯಾಯವನ್ನು ಸೇರಿಸಿ, ಅದು ಮೊದಲಿನಿಂದಲೂ ಸ್ಕಂದ ಪುರಾಣದ ಭಾಗವಾಗಿತ್ತೆಂದು ಹೇಳಿ ಅದರ ಪ್ರಕಾರ 3ನೇ ಸಲ ವಲಸೆ ಬಂದ ಬ್ರಾಹ್ಮಣರಿಗೆ ಮಾತ್ರ ಪೂಜೆ ಮಾಡುವ ಹಕ್ಕು ಇದೆ, ಅವರು ಮಾತ್ರಾ ಷಟ್ಕರ್ಮಿಗಳು, ಉಳಿದವರು ತ್ರಿಕರ್ಮಿಗಳು ಎಂದು ಸುಳ್ಳು ಬರೆದು ನಮ್ಮನ್ನು ಪೂಜೆಯಿಂದ ದೂರ ಇಡುವ ಪ್ರಯತ್ನವನ್ನು ಮಾಡಿದರು.

ಇನ್ನೊಂದು ಕಡೆ ಊರಿನ ಶಾನುಭೋಗ, ವಕೀಲರಾಗಿದ್ದ ನಾವು ನಮ್ಮ ಸಾಮಂತರಿಗೆ, ರಾಜರಿಗೆ ಸಹಾಯ ಮಾಡಿ ಅವರ ವಿರೋಧಿ ಗಳೊಂದಿಗೆ/ಬ್ರಿಟಿಷರೊಂದಿಗೆ ಹೋರಾಡಿ, ಸಾಮಂತರ ಸೋಲಿನೊಂದಿಗೆ ಗ್ರಾಮದಲ್ಲಿದ್ದ ನಮ್ಮ ಅಧಿಕಾರವನ್ನು ಕಳೆದುಕೊಂಡೆವು. ದೇವಸ್ಥಾನದ ಮುಖ್ಯಸ್ಥರಾಗಿ ದೇವಸ್ಥಾನಕ್ಕೆ ಕೊಡುತ್ತಿದ್ದ ಅಕ್ಕಿಯನ್ನು ದೇವಸ್ಥಾನದ ಪರಿಚಾರಕರಾಗಿ ಕೊಡುವ ಪರಿಸ್ಥಿತಿಗೆ ಬಂದೆವು. ಇದ್ದ ಆಸ್ತಿಯನ್ನೂ ಒಕ್ಕಲಿಗೆ ಕೊಟ್ಟಿದ್ದೆವು. ವೇದ ಅಧ್ಯಯನವನ್ನು ಬಿಟ್ಟು, ಪೌರೋಹಿತ್ಯವನ್ನು ಬಿಟ್ಟು ಯಾವ ಆದಾಯವೂ ಇಲ್ಲದಾಯಿತು. ಗ್ರಾಮದ ಆಡಳಿತವೂ ಕೈತಪ್ಪಿ ಬೇರೆಯವರ ದಾಯಿತು. ವಿದ್ಯಾಹೀನರಾಗಿ ಬೇರೆ ಕೆಲಸ ಮಾಡಲು ಗೊತ್ತಿಲ್ಲದೆ ಬಡತನದ ಜೀವನ ಸಾಗಿಸಿದೆವು. 15ನೇ ಶತಮಾನದ ವರೆಗೆ ವೈಭವ ದಿಂದ ಮೆರೆದು ಅಗ್ರಪಂಕ್ತಿಗರಾದ ನಾವು 16ನೇ ಶತಮಾನದಲ್ಲಿ ಅಡ್ಡಪಂಕ್ತಿಗೆ ಬಂದಿಳಿದೆವು. ಇದೇ ಸಮಯದಲ್ಲಿ ನಮ್ಮ ರಾಜ್ಯದ ಬೇರೆ ಬೇರೆ ಭಾಗದಲ್ಲಿದ್ದ ಸ್ಥಾನಿಕ ಬ್ರಾಹ್ಮಣರು ಅಲ್ಲಿಯ ಸ್ಥಳೀಯ ಬ್ರಾಹ್ಮಣರೊಂದಿಗೆ ಐಕ್ಯಗೊಂಡಂತೆ ನಮ್ಮಲ್ಲಿಯೂ ತಂತ್ರಿಗಳು, ಪೂಜೆಯಲ್ಲಿ ಇದ್ದವರು, ಇನ್ನೂ ಕೆಲವು ಅನುಕೂಲಸ್ಥ ಸ್ಥಾನಿಕ ಬ್ರಾಹ್ಮಣರು ಜೀವನೋಪಾಯಕ್ಕಾಗಿ ಬಹು ಮತದ ಬ್ರಾಹ್ಮಣರೊಂದಿಗೆ ಐಕ್ಯಗೊಂಡರು. ಇನ್ನು ಬಡತನದಲ್ಲಿ, ಹಠತನದಲ್ಲಿದ್ದವರು ಮಾತ್ರ ಸ್ಥಾನಿಕ ಬ್ರಾಹ್ಮಣರಾಗಿ ಉಳಿದರು. ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ಬಂದ ಒಕ್ಕಲು ಮಸೂದೆ ನಮ್ಮ ಸಮಾಜಕ್ಕೆ ಒಂದು ಬರೆಯಾಗಿ ಪರಿಣಮಿಸಿ, ಇದ್ದ ಆಸ್ತಿ ಎಲ್ಲಾ ಹೋಗಿ, ಬರುತ್ತಿದ್ದ ಸ್ವಲ್ಪ ಆದಾಯವೂ ಬಾರದಂತಾಯಿತು. 16ನೇ ಶತಮಾನದಿಂದ ಶೃಂಗೇರಿ ಗುರುಗಳೊಂದಿಗೆ ತಪ್ಪಿಹೋದ ಸಂಬಂಧ, ಸುಬ್ರಹ್ಮಣ್ಯದ ಶೃಂಗೇರಿ ಶಿಷ್ಯ ಮಠದ ಗುರುಗಳಾಗಿದ್ದ ಸ್ಥಾನಿಕ ಸ್ವಾಮೀಜಿಯ ಹತ್ಯೆ ಇದೆಲ್ಲ ನಮ್ಮಲ್ಲಿದ್ದ ಹತು ಹಲವಾರು ಸಮಸ್ಯೆಗಳಾಗಿತು. 1ನೇ ಶತಮಾನದಿಂದ 15ನೇ ಶತಮಾನದವರೆಗೆ ತುಂಬಾ ಉಚ್ಛ್ರಾಯ ಸ್ಥಿತಿಯಲ್ಲಿದ್ದ ನಮ್ಮ ಸಮಾಜಕ್ಕೆ 16ನೇ ಶತಮಾನದಿಂದ 20ನೇ ಶತಮಾನದವರೆಗೆ ಅಧೋಗತಿಯ ಸಮಯ ವಾಗಿತು. ಇಲ್ಲಿ ನಮ್ಮ ಹಿರಿಯರು ಅತ್ಯಂತ ದುಃಖ, ಬಡತನ, ಹಿಂಸೆ, ಅವಮಾನವನ್ನು ಅನುಭವಿಸಿದ್ದಾರೆ.

ಈ ತಳಹದಿಯಿಂದ 20ನೇ ಶತಮಾನದ ಉತರಾರ್ಧದಲ್ಲಿ ನಮ್ಮ ಸಮಾಜದ ಏಳಿಗೆ ಯನ್ನು ಪುನರಾರಂಭಿಸಿದೇವೆ. ನಮ್ಮ ಜಿಲ್ಲೆಯ ಬ್ರಾಹ್ಮಣ ಸಮಾಜದ ಪ್ರಥಮ ಸಂಘವಾದ ಸುಬ್ರಹ್ಮಣ್ಯ ಸಭಾ ಪ್ರಾರಂಭವಾಗಿ 102 ವರ್ಷಗಳಾಗಿವೆ. ಸುಬ್ರಹ್ಮಣ್ಯ ಬ್ಯಾಂಕಿನ ಪ್ರಾರಂಭ, ಹಲವಾರು ಸಂಘಗಳನ್ನು ಆರಂಭಿಸಿ ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ, ನಮ್ಮ ಸಮಾಜದ ಹಲವಾರು ದೇವಸ್ಥಾನಗಳ ಅಭಿವೃದ್ಧಿ, ಪ್ರತಿವರ್ಷ ನಮ್ಮ ಗುರುಗಳ ಭೇಟಿಯ ಕಾರ್ಯಕ್ರಮದ ಪುನರಾರಂಭ ಇತ್ಯಾದಿ ಕೆಲಸ ಕಾರ್ಯಗಳು ನಡೆಯುತಿವೆ. ನಮ್ಮ ಸಮಾಜದ ಅನೇಕ ವಿದ್ಯಾವಂತರು ಉತಮವಾದ, ಅಗ್ರಹುದ್ದೆಗಳನ್ನು ಅಲಂಕರಿಸಿ ನಾವು ಸ್ಥಾನಿಕ ಬ್ರಾಹ್ಮಣರೂ ಉನ್ನತ ಸ್ಥಾನವನ್ನು ಅಲಂಕರಿಸಲು ಯೋಗ್ಯತೆಯನ್ನು ಹೊಂದಿದ ಸಮಾಜದವರು ಎನ್ನುವುದನ್ನು ತೋರಿಸಿದ್ದಾರೆ. ಇದರೊಂದಿಗೆ ಇನ್ನು ಆಗಬೇಕಾದ ಕೆಲಸ ತುಂಬಾ ಇದೆ. ನಮ್ಮಲ್ಲಿ ಆರ್ಥಿಕವಾಗಿ ಹಿಂದೆ ಉಳಿದವರಿಗೆ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿ, ಮುಂದೆ ಒಳ್ಳೆಯ ವೃತ್ತಿಗೆ ಪ್ರೋತ್ಸಾಹ ಕೊಟ್ಟು ಅವರನ್ನು ಎತಿ ಹಿಡಿಯಬೇಕಾಗಿದೆ. ಮಾಡುತಿರುವ ಯಾವುದೇ ಉದ್ಯೋಗದಲ್ಲಿ ಉನ್ನತಮಟ್ಟವನ್ನು ಮುಟ್ಟಲು ಪ್ರಯತ್ನಿಸಬೇಕು. (In any Field we should be excellant and we should be in top, as we have got more tension bearing capacity and leadership quality). ನಾವು ಸ್ಥಾನಿಕ ಬ್ರಾಹ್ಮಣರು ಉನ್ನತ ಅಧಿಕಾರಿಯಾಗಲು ಅತ್ಯಂತ ಯೋಗ್ಯರು ಎನುವುದನ್ನು ಸಮಾಜಕ್ಕೆ ತೋರಿಸಬೇಕು. ಹಾಗೆಯೇ ನಾವು ವೈದಿಕ ವೃತ್ತಿಯಲ್ಲಿ ಬಹಳ ಹಿಂದೆ ಉಳಿದಿದ್ದೇವೆ. ಇದಕ್ಕಾಗಿ ನಾವು ವೇದಾಧ್ಯಯನ, ಜಪ ತಪ, ಪೂಜೆ ಪುನಸ್ಕಾರ ದೊಂದಿಗೆ ಬ್ರಾಹ್ಮಣ ಸಂಸ್ಕೃತಿ, ಆಚಾರ ವಿಚಾರವನ್ನು ಎಲ್ಲರೂ ಅಭ್ಯಸಿಸಿ ಪಾಲಿಸಿಕೊಂಡು ಬರಬೇಕು. ಇದನ್ನು ನಾವೆಲ್ಲರೂ ಎಷ್ಟು ಬೇಗ ನಮ್ಮದನ್ನಾಗಿಸು ತ್ತೇವೆಯೋ ಅಲ್ಲಿಂದ ನಾವು ಪರಿಪೂರ್ಣ ಸ್ಥಾನಿಕ ಬ್ರಾಹ್ಮಣರಾಗುತ್ತೇವೆ. (ಉನ್ನತ ಸ್ಥಾನದಲ್ಲಿರುವ ಶ್ರೇಷ್ಠ ಬ್ರಾಹ್ಮಣರು). ನಮ್ಮನ್ನು ತೀಡಿ ತಿದ್ದಿಕೊಂಡು ಮುಂದಿನವರಿಗೆ ಆದರ್ಶ ರಾಗಬೇಕು. ನಮ್ಮ ಸಮಾಜದ ಗತ ವೈಭವ ವನ್ನು ಮರುಕಳಿಸುವಂತೆ ಮಾಡಬೇಕು. ಇದಕ್ಕೆ ನಾವೆಲ್ಲರೂ ಸೇರಿ ಮುಂದಿನ ನಮ್ಮ ಸಮಾಜದ ಭವ್ಯ ಚರಿತ್ರೆಯನ್ನು ಬರೆಯಲು ನಾಂದಿ ಹಾಡೋಣ. ಈ ಬಗ್ಗೆ ಈ ಸಮ್ಮೇಳನದಲ್ಲಿ ಚರ್ಚಿಸಿ ಉತರವನ್ನು ಕಂಡುಕೊಳ್ಳಬೇಕು. ಇಂತಹ ಸಮ್ಮೇಳನದಲ್ಲಿ ಕಂಡುಕೊಂಡ ಉತರವನ್ನು ತಪ್ಪದೇ ಪಾಲಿಸಬೇಕು. ಆಗ ಮಾತ್ರ ಈ ಸಮ್ಮೇಳನ ಅರ್ಥಪೂರ್ಣವಾಗು ತ್ತದೆ.

ಓಂ ಹರಿ ಓಂ



ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ



ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಮಾಂಗಲ್ಯಂ ತಂತುನಾನೇನ ....

ಫಲಿಮಾರು ಶ್ರೀಮತಿ ವಿಜಯ ಮತ್ತು ಶ್ರೀ ಪಿ. ಸತೀಶ್ ರಾವ್ ಇವರ ಪುತ್ರಿ **ರೇಷ್ಮಾ** ಹಾಗೂ ದಿ| ಶ್ರೀಮತಿ ಕೆ.ಬಿ.ವಿಜಯಲಕ್ಷ್ಮೀ ಮತ್ತು ದಿ| ಕೆ.ಎಸ್. ಭಾಸ್ಕರ್‌ರಾವ್, ಮೊಸರಮಾವು ಇವರ ಪುತ್ರ **ಪ್ರಶಾಂತ** ಇವರ ವಿವಾಹವು ತಾ.25-03-2012ರಂದು ಉಚ್ಚಿಲ ಬ್ರಹ್ಮಶ್ರೀ ಗುರುನಾರಾಯಣ ಸಭಾಭವನದಲ್ಲಿ ನೆರವೇರಿತು.

★★★★

ರಾಮಕುಂಜ ಗ್ರಾಮದ ಬದೆಂಜ ಎಂಬಲ್ಲಿರುವ ಕಡಬ ಕುಂಬಾಟ್ ಶ್ರೀಮತಿ ಮತ್ತು ಶ್ರೀ ಶಶಿಧರ ರಾಯರ ಪುತ್ರಿ **ಮಧುಶ್ರೀ** ಹಾಗೂ ಪೇರೂರು ಶ್ರೀಮತಿ ಮತ್ತು ಶ್ರೀ ಭೂಪತಿ ರಾಯರ ಪುತ್ರ **ಅಜಯ್ ಕುಮಾರ್** ಇವರ ವಿವಾಹವು ತಾ.28-03-2012ರಂದು ರಾಮಕುಂಜ ಗ್ರಾಮದ ಬದೆಂಜ ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ನೆರವೇರಿತು.

★★★★

ಹೊಸತೋಟ ಶ್ರೀಮತಿ ಮತ್ತು ಶ್ರೀ ರಾಮಚಂದ್ರ ರಾವ್ ಇವರ ಪುತ್ರ **ಮಧುಕರ** ಹಾಗೂ ತಂತ್ರಾಡಿ ಶ್ರೀಮತಿ ಮಹಾಲಕ್ಷ್ಮೀ ಮತ್ತು ಶ್ರೀ ಬಾಬುರಾಯರ ಶ್ಯಾನುಭೋಗರ ಪುತ್ರಿ **ಅಶ್ವಿನಿ** ಇವರ ವಿವಾಹವು ತಾ.29-03-2012ರಂದು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ಸನ್ನಿಧಿಯಲ್ಲಿರುವ ಶ್ರೀಪತಿ ಅಡಿಗರ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಬೆಳ್ಳಗುಂಡಿ ಮುದ್ರಾಡಿ ಶ್ರೀಮತಿ ಶಾಂಭವಿ ಮತ್ತು ಶ್ರೀ ರಂಗಯ್ಯ ಹೆಬ್ಬಾರರ ಪುತ್ರ **ಹರಿಪ್ರಸಾದ** ಹಾಗೂ ಪುತ್ತಿಗೆ ಶ್ರೀಮತಿ ಲಕ್ಷ್ಮೀ ಮತ್ತು ಶ್ರೀ ಕೃಷ್ಣರಾವ್‌ರವರ ಪುತ್ರಿ **ರತ್ನಾವತಿ** ಇವರ ವಿವಾಹವು ತಾ.06-04-2012ರಂದು ಮೂಡುಬಿದ್ರಿ ಪುತ್ತಿಗೆ ಶ್ರೀ ಸೋಮನಾಥ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★★

ಹೊಸ್ಕೋಟೆ ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀ ಆನಂದ ರಾವ್ ಇವರ ಪುತ್ರಿ **ದೀಪಿಕಾ (ಅಂಬಿಕಾ)** ಹಾಗೂ ಮೂಡುಬೆಳ್ಳೆ ಶ್ರೀಮತಿ ಮತ್ತು ಶ್ರೀ ವೆಂಕಟರಮಣ ರಾವ್ ಇವರ ಪುತ್ರ **ಚಂದ್ರಕಾಂತ್** ಇವರ ವಿವಾಹವು ತಾ.8-4-2012 ಬೈಂದೂರು ಬಂಕೇಶ್ವರದಲ್ಲಿರುವ ಶ್ರೀ ರಾಜರಾಜೇಶ್ವರಿ ಕಲ್ಯಾಣ ಮಂದಿರದಲ್ಲಿ ನೆರವೇರಿತು. ಮರುದಿನ ತಾ.9-4-2012 ಸೋಮವಾರ ಬೆಳಿಗ್ಗೆ 9-30ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಔತಣಕೂಟ ಮೂಡುಬೆಳ್ಳೆ 'ಅನುಗ್ರಹ' ವರನ ಮನೆಯಲ್ಲಿ ಜರಗಿತು.

★★★★

ಯರ್ಲಪಾಡಿ ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಐ.ಸುಬ್ರಹ್ಮಣ್ಯ ಶರ್ಮರ ಪುತ್ರಿ **ಅಮೃತ** ಹಾಗೂ ಅದ್ಯಪಾಡಿ ಶ್ರೀಮತಿ ವೇದಾವತಿ ಮತ್ತು ಶ್ರೀ ವಸಂತ ರಾಯರ ಪುತ್ರ **ಅರುಣಕುಮಾರ್** ಇವರ ವಿವಾಹವು ತಾ.15-4-2012ರಂದು ಕಾರ್ಕಳ ತೆಳ್ಳಾರು ರಸ್ತೆಯ ಶ್ರೀ ರಾಘವೇಂದ್ರ ಮಠದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ನಿಧನ

### ಜೆ. ನಾರಾಯಣ ಹೆಬ್ಬಾರ್

ಕೆರ್ಗಾಲ್ ಗ್ರಾಮದ ಕುಂಚೇಶಿಯಲ್ಲಿ ವಾಸ್ತವ್ಯವಿದ್ದ ಶ್ರೀ ಜಂಬೆ ನಾರಾಯಣ ಹೆಬ್ಬಾರ್ (84) ಇವರು ತಾ.29-02-2012ರಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಐವರು ಪುತ್ರಿಯರು, ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

## ಮೇಷ ಮಾಸದ ವಿಶೇಷ ದಿನಗಳು

| | |
|---|---|
| 16-04-2012 | ಸ್ಮಾರ್ತೈಕಾದಶೀ |
| 21-04-2012 | ಅಮಾವಾಸ್ಯೆ |
| 24-04-2012 | ಅಕ್ಷಯ ತೃತೀಯ |
| 26-04-2012 | ಶ್ರೀ ಶಂಕರ ಜಯಂತಿ |
| 02-05-2012 | ಸರ್ವೈಕಾದಶೀ |
| 06-05-2012 | ಹುಣ್ಣಿಮೆ |
| 09-05-2012 | ಸಂಕಷ್ಟಹರ ಚೌತಿ |
| 14-05-2012 | ವೃಷಭ ಸಂಕ್ರಮಣ |

## ವೈವಾಹಿಕ ಜೀವನದ ಸುವರ್ಣ ಮಹೋತ್ಸವ ಆಚರಣೆ

ಶ್ರೀ ಬೆಳ್ಳರ್ಪಾಡಿ ಅನಂತರಾಮ ರಾವ್ ಮತ್ತು ಶ್ರೀಮತಿ ಪದ್ಮಾಕ್ಷಿ ರಾವ್ ಇವರ ವೈವಾಹಿಕ ಜೀವನದ ಸುವರ್ಣ ಮಹೋತ್ಸವವು ತಾ.19-3-2012ರಂದು ಹಿರಿಯಡ್ಕದಲ್ಲಿರುವ ಶ್ರೀ ಗಣೇಶ ಕಲಾ ಮಂದಿರದಲ್ಲಿ ಗಣಹೋಮ ಮತ್ತು ಶ್ರೀ ಸತ್ಯನಾರಾಯಣ ಪೂಜೆಯೊಂದಿಗೆ ಅಪಾರ ಬಂಧುಮಿತ್ರರ ಸಮ್ಮುಖದಲ್ಲಿ ನೆರವೇರಿತು.

## ಗೃಹಪ್ರವೇಶ

ಶ್ರೀಮತಿ ಭವಾನಿ ಮತ್ತು ಶ್ರೀ ರಾಜೇಶ್‌ರಾವ್ ಇವರು ಪರ್ಕಳ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದ ಬಳಿ ನೂತನವಾಗಿ ಕಟ್ಟಿಸಿದ 'ಶ್ರೀ ಲಕ್ಷ್ಮೀ' ಇದರ ಪ್ರವೇಶೋತ್ಸವವನ್ನು ತಾ.17-3-2012ರಂದು ನೆರವೇರಿಸಿದರು.

## ಶುಭ ಜನನ

ಬೆಂಗಳೂರಿನಲ್ಲಿ ವಾಸ್ತವ್ಯವಿರುವ ನಿಟ್ಟೆ ಕೆಮ್ಮಣ್ಣು ಪಡುಮನೆಯ ದೀಪಕ್ ಕುಮಾರ್ ಮತ್ತು ಉಡುಪಿ ಕುಂಜಿಬೆಟ್ಟಿನ ಶ್ರೀಮತಿ ಪ್ರೀತಿ ರಾವ್ ದಂಪತಿಗಳಿಗೆ ತಾ.26-01-2012ರಂದು ಹೆಣ್ಣು ಶಿಶುವಿನ ಜನನ.

## ವಿಳಾಸ ಬದಲಾವಣೆ

**ಎಸ್.ರಾಧಾಕೃಷ್ಣ**
''ಮೈಸೂರ್ ಮನೆ'' 1-115/2,
ಕವಿಮುದ್ದಣ ಮಾರ್ಗ, ನಂದಳಿಕೆ,
ಬೆಳ್ಮಣ್ಣು-576111, ಉಡುಪಿ ಜಿಲ್ಲೆ.

## ಸೀಮಂತೋನ್ನಯನ

ಶ್ರೀಮತಿ ಜ್ಞಾನೇಶ್ವರಿ ಮತ್ತು ಪೆರ್ಡೂರು ರಾಮಚಂದ್ರ ಕೊಠಾರಿ ಪರ್ಕಳ ಇವರ ಸೊಸೆ ಶ್ರೀಮತಿ ಅನಿತಾ (ಶ್ರೀ ಸುದೀಪ್ ಸಿಂಗಾಪುರ ಇವರ ಧರ್ಮಪತ್ನಿ ಹಾಗೂ ಎಸ್. ಅನಂತ ಪ್ರಕಾಶ್ ರಾವ್ ಬೆಂಗಳೂರು, ಶ್ರೀಮತಿ ಶಾರದ ರಾವ್ ಇವರು ಮಗಳು) ಇವರ ಸೀಮಂತೋನ್ನಯನವು ತಾ.1-3-2012ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದ ಬಳಿ ಇರುವ 'ಶ್ರೀ ಜ್ಞಾನ ಮಂದಿರ'ದಲ್ಲಿ ನೆರವೇರಿತು.

## ನಿಧನ

### ರತ್ನಾವತಿ ಹೆಬ್ಬಾರ್

ಮರೂರು ಶಂಕರ ಹೆಬ್ಬಾರರ ಧರ್ಮಪತ್ನಿ ಶ್ರೀಮತಿ ರತ್ನಾವತಿ ಹೆಬ್ಬಾರ್ (76ವ) ಇವರು ಅಲ್ಪಕಾಲದ ಅಸೌಖ್ಯದಿಂದ ತಾ.29-01-2012 ರಂದು ಮರೂರಿನ ಸ್ವಗೃಹದಲ್ಲಿ ನಿಧನರಾಗಿರುತ್ತಾರೆ. ಮೃತರು ಐವರು ಪುತ್ರರು, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು, ಮರಿಮಗಳು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

★★★ ★★★

### ಮಾಂಟ್ರಾಡಿ ಪ್ರೇಮಲೀಲಾ ಆರ್.ರಾವ್

ದಿ| ಶ್ರೀ ಮಾಂಟ್ರಾಡಿ ರಘುರಾಮ ರಾವ್‌ರವರ ಧರ್ಮಪತ್ನಿ ಶ್ರೀಮತಿ ಪ್ರೇಮಲೀಲಾ ಆರ್. ರಾವ್ (69) ಇವರು ತಾ.02-03-2012 ರಂದು ದೈವಾಧೀನರಾದರು. ಇವರು ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಶ್ರೀಮತಿ ಕಾವೇರಮ್ಮ

ಕುಕ್ಕೆಹಳ್ಳಿ ಶ್ರೀ ಗುಂಡುರಾಯರ ಧರ್ಮಪತ್ನಿ ಶ್ರೀಮತಿ ಕಾವೇರಮ್ಮ (83) ಇವರು ತಾ.22-03-2012ರಂದು ದೈವಾಧೀನರಾದರು. ಇವರು ಪತಿ, ನಾಲ್ವರು ಪುತ್ರರು, ಏಳು ಜನ ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

### ರತ್ನಾಕರ ಬಿ.ರಾವ್

ಮೂಲ್ಕಿ ಬಪ್ಪನಾಡಿನ ಖ್ಯಾತ ಜ್ಯೋತಿಷಿ ಹಾಗೂ ಕಾರ್ನಾಡು ಹರಿಹರ ಕ್ಷೇತ್ರದಲ್ಲಿ 20 ವರ್ಷ ಅರ್ಚಕರಾಗಿ ಸೇವೆ ಸಲ್ಲಿಸಿದ್ದ ಸಮಾಜ ಸೇವಕ ಶ್ರೀ ಬಿ. ರತ್ನಾಕರ ರಾವ್ (84) ಇವರು ತಾ.15-03-2012ರಂದು ತಮ್ಮ ಸ್ವಗೃಹದಲ್ಲಿ ದೈವಾಧೀನರಾದರು. ಇವರು ಪತ್ನಿ, ಇಬ್ಬರು ಪುತ್ರರು, ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

ಇವರು ಪ್ರಸಿದ್ಧ ಸಮಾಜ ಸೇವಕ ಮೂಲ್ಕಿ ಪಂಚಾಯತ್‌ನ ಅಧ್ಯಕ್ಷರಾಗಿದ್ದ ದಿ| ಬಪ್ಪನಾಡು ಭೋಜರಾವ್ ಇವರ ಪುತ್ರ.

★★★ ★★★

### ಬಿ. ಕೆ. ಮಾಧವ ರಾವ್

ಉಡುಪಿ ಬೈಲೂರಿನ ಶ್ರೀ ಬಿ.ಕೆ.ಮಾಧವ ರಾವ್ (83) ಇವರು ತಾ.12-03-2012 ರಂದು ದೈವಾಧೀನರಾದರು. ಇವರು ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ. ಇವರು ಕರ್ನಾಟಕ ಬ್ಯಾಂಕಿನ ನಿವೃತ್ತ ಅಧಿಕಾರಿಗಳು. ಇವರು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರಾಗಿದ್ದರು.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಡಾ| ವೈ. ಸುದರ್ಶನ ರಾವ್**

**ಪ್ರಶ್ನೆ : ತಲೆಯ ಕೂದಲುಗಳುದುರಲು ಕಾರಣಗಳೇನು? ಅದರ ಚಿಕಿತ್ಸೆ ಹೇಗೆ?**

**ಉತ್ತರ :** ಮನುಷ್ಯನ ತಲೆಯಲ್ಲಿ ಸುಮಾರು ಒಂದು ಮಿಲಿಯಕ್ಕೂ ಹೆಚ್ಚು ಕೂದಲುಗಳಿವೆ. ಅವುಗಳಲ್ಲಿ ದಿನಕ್ಕೆ ಸರಾಸರಿ ನೂರರಷ್ಟು ಕೂದಲುಗಳು ತನ್ನಿಂತಾನಾಗೆ ಅಥವಾ ಕೂದಲು ಬಾಚುವಾಗ ಅಥವಾ ತುರಿಸಿಕೊಳ್ಳುವಾಗ ಅಥವಾ ಕೂದಲು ತೊಳೆಯುವಾಗ ಉದುರಿ ಹೋಗುತ್ತವೆ. ಹಾಗೆಯೆ ಪ್ರತಿದಿನವೂ ಅಷ್ಟೇ ಕೂದಲುಗಳು ಬೆಳೆದಿರುತ್ತವೆ. ಉದುರಿದ ಕೂದಲುಗಳ ಸಂಖ್ಯೆಯು ಹೊಸದಾಗಿ ಬೆಳೆದ ಕೂದಲುಗಳ ಸಂಖ್ಯೆಗಿಂತ ಹೆಚ್ಚಾದರೆ ಜಡೆ ತೆಳ್ಳಗಾಗಿ ಕೂದಲುದುರುವುದು ಗಮನಕ್ಕೆ ಬರುತ್ತದೆ. ಹೀಗೆ ಕೂದಲುದುರುತ್ತಾ ಹೋದರೆ ಬಕ್ಕತನ ಉಂಟಾಗುತ್ತದೆ. ಈ ಬಕ್ಕತನವು ಕೆಲವೊಮ್ಮೆ ಶಾಶ್ವತವಾಗಿಯೂ ಇನ್ನು ಕೆಲವೊಮ್ಮೆ ತಾತ್ಕಾಲಿಕವಾಗಿಯೂ ಇರಬಹುದು.

ಶಾಶ್ವತವಾದ ಬಕ್ಕತನವು ತಾತ್ಕಾಲಿಕ ಬಕ್ಕತನಕ್ಕಿಂತ ಸಂಪೂರ್ಣವಾಗಿ ಬೇರೇಯೇ ತರಹದ ಖಾಯಿಲೆ. ಇದು ಹೆಚ್ಚಾಗಿ ಗಂಡಸರಲ್ಲಿ ಕಾಣುವಂತಾದ್ದು. ಗಂಡಸರಲ್ಲಿ ತಯಾರಾಗುವ ಗಂಡಸುತನದ ಹಾರ್ಮೋನ್ (ಟೆಸ್ಟೋಸ್ಟಿರಾನ್) ಇದಕ್ಕೆ ಕಾರಣ. ಹಾಗಿದ್ದರೂ ಈ ತರದ ಬಕ್ಕತನವು ಎಲ್ಲ ಗಂಡಸರಲ್ಲಿ ಕಾಣದೆ ಈ ಬಕ್ಕತನದ ಖಾಯಿಲೆಯನ್ನು ಅನುವಂಶೀಯವಾಗಿ ಪಡೆದಿರುವವರಲ್ಲಿ ವಯಸ್ಸಾದಂತೆ ಕಾಣಿಸಿಕೊಳ್ಳುತ್ತದೆ.

ಅಪರೂಪವಾಗಿ ಹೆಂಗಸರಲ್ಲೂ ಕೂಡ ಶಾಶ್ವತ ಬಕ್ಕತನ ಮುಟ್ಟು ನಿಂತ ಮೇಲೆ ಆಗುವುದುಂಟು. ಆದರೂ ಹೆಂಗಸರಲ್ಲಿ ಈ ಕಾರಣದಿಂದಾಗಿ ಗಂಡಸರಂತೆ ಬೋಳುತಲೆ ಆಗದೆ ತಲೆಯಲ್ಲಿ ಕೂದಲುಗಳು ವಿರಳವಾಗಿ ನೆತ್ತಿ ಕಾಣಿಸುವಂತಿರುತ್ತದೆ.

ಬೋಳುತಲೆ ಆಗದೆ ಕೇವಲ ಕೂದಲುದುರುವುದು ಹೆಚ್ಚಿನವರನ್ನು ಕಾಡುವ ಸಮಸ್ಯೆ. ಇದಕ್ಕೆ ಅತ್ಯಂತ ಮಾಮೂಲಿಯಾದ ಕಾರಣವೆಂದರೆ ಅಧಿಕ ಮಾನಸಿಕ ಒತ್ತಡ, ಅಪೌಷ್ಟಿಕತೆ ಮತ್ತು ರಕ್ತಹೀನತೆ ಆಗಿರುತ್ತದೆ. ಇನ್ನು ಕೆಲವರಲ್ಲಿ ಇದು ಅವರು ಸೇವಿಸುತ್ತಿರುವ ಕೆಲವು ಔಷಧಿಗಳ ಪ್ರಭಾವದಿಂದಾಗಿ ಆಗಿರಬಹುದು. (ಉದಾ : ಕೆಲವು ರಕ್ತದೊತ್ತಡ ಕಡಿಮೆ ಮಾಡುವ ಔಷಧಿಗಳು, ರಕ್ತದಲ್ಲಿ ಕೊಲೆಸ್ಟಿರಾಲ್ ಕಡಿಮೆ ಮಾಡುವ ಔಷಧಿಗಳು, ಕ್ಯಾನ್ಸರ್ ಖಾಯಿಲೆಯ ಔಷಧಿಗಳು, ಗರ್ಭನಿರೋಧಕ ಮಾತ್ರೆಗಳು ಇತ್ಯಾದಿ). ಇನ್ನು ಕೆಲವರಲ್ಲಿ ಅಂಡಾಶಯದಲ್ಲಿ ಬೆಳೆದ ಗಡ್ಡೆಗಳಿಂದಾಗಿ, ಥೈರಾಯ್ಡ್ ಗ್ರಂಥಿಯ ತೊಂದರೆಗಳಿಂದಾಗಿ, ಗರ್ಭಿಣಿಯರಲ್ಲಿ, ಹೆರಿಗೆಯ ನಂತರ ಹಾಗೂ ಇತರೆ ತೀವ್ರ ದೈಹಿಕ ಹಾಗೂ ಮಾನಸಿಕ ಖಾಯಿಲೆಯ ಪ್ರಭಾವದಿಂದಾಗಿ ಕೂದಲುದುರುತ್ತದೆ.

ಕೂದಲನ್ನು ಅತಿಯಾಗಿ ಬಾಚುವುದು, ಯಾವಾಗಲೂ ಎಳೆಯುತ್ತಿರುವುದು, ಜುಟ್ಟನ್ನು ಬಿಗಿಯಾಗಿ ಹಿಂಡಿ ಕಟ್ಟುವುದು, ಧೂಳು ಹಾಗೂ ಬಿಸಿಲಿಗೆ ಒಡ್ಡಿಕೊಳ್ಳುವುದು ಕೂದಲುದುರಲು ಇನ್ನೂ ಇತರ ಸಾಮಾನ್ಯ ಕಾರಣಗಳು. ಕೆಲವರಿಗೆ ತಮ್ಮ ಕೂದಲನ್ನೇ ಕೀಳಿಕೊಳ್ಳುವುದು ಒಂದು ಬಗೆಯ ಮಾನಸಿಕ ಕಾಯಿಲೆ. ತಲೆಯಲ್ಲಿ ಬೆಳೆದ ಕಜ್ಜಿ, ಫಂಗಸ್‌ಗಳೂ ಕೂಡ ಕೂದಲುದುರಲು ಕಾರಣವಾಗಿರಬಹುದು.

ಕೂದಲುದುರಲು ಮೇಲೆ ಹೇಳಿದ ಕಾರಣವೇನಾದರು ಇದೆಯೇ ಎಂದು ತಪಾಸಣೆ ಮಾಡುವುದು ಎಲ್ಲಕ್ಕಿಂತ ಮೊದಲು ಮಾಡಬೇಕಾದ ಕೆಲಸ. ಅಂತದ್ದೇನಾದರೂ ಖಾಯಿಲೆ ಇದ್ದರೆ ಅದರ ಚಿಕಿತ್ಸೆ ಮಾಡಿದರೆ ಕೂದಲುದುರುವುದು ತನ್ನಿಂತಾನಾಗಗೆ ಸರಿಹೋಗುತ್ತದೆ. ಯಾವುದಾದರೂ ಔಷಧಿ ಸೇವಿಸುತ್ತಿದ್ದರೆ ಅದರಿಂದಾಗಿ ಕೂದಲುದುರುತ್ತಿದೆಯೇ ಎಂದು ವಿಚಾರಿಸಿ ಔಷಧಿಯನ್ನು ಬದಲಾಯಿಸಬೇಕು. ಯೋಗಾಸನ ಹಾಗೂ ಧ್ಯಾನ ಹಾಗೂ ಜೀವನ ಶೈಲಿಯಲ್ಲಿಯ ಬದಲಾವಣೆ ಮಾನಸಿಕ ಒತ್ತಡ ಕಡಿಮೆ ಮಾಡೀತು. ರಕ್ತ ಹೀನತೆಯನ್ನು ನೀಗಲು ಕಬ್ಬಿಣದಂಶದ ಮಾತ್ರೆಗಳನ್ನು ಸೇವಿಸಬೇಕು ಹಾಗೂ ವಿಟಮಿನ್, ಮುಖ್ಯವಾಗಿ ಬಯೋಟಿನ್ ಮಾತ್ರೆಗಳನ್ನು ಸೇವಿಸುವುದು ಕೂಡ ಉತ್ತಮ ಫಲಿತಾಂಶ ನೀಡುತ್ತದೆ.

ಬಿಸಿಲಿನಲ್ಲಿ ಹೋಗುವಾಗ ಕೊಡೆ ಹಿಡಿಯುವ ಮೂಲಕ ಕೂದಲಿಗೆ ರಕ್ಷಣೆ ಕೊಡಿ. ನಿಯಮಿತವಾಗಿ ಎಣ್ಣೆ ಹಾಗೂ ಶಾಂಪೂ ಉಪಯೋಗಿಸಿ ಕೂದಲನ್ನು ತೊಳೆಯುವುದರಿಂದ ಕೂದಲಿನಲ್ಲಿರುವ ಕೊಳೆ ತೊಲಗಿ ಸ್ವಚ್ಛವಾಗಿರುತ್ತದೆ. ಹಾಗೂ ಇದರಿಂದಾಗಿ ತಲೆ ತುರಿಕೆ ಕಡಿಮೆಯಾಗುತ್ತದೆ ಮತ್ತು ಕೂದಲಿನಲ್ಲಿ ಫಂಗಸ್ ಬೆಳೆಯುವುದಿಲ್ಲ, ಈ ಕ್ರಮಗಳಿಂದಾಗಿ ಕೂದಲು ಆರೋಗ್ಯಯುತವಾಗಿರುತ್ತದೆ.

ರೋಮಕೂಪಗಳಿಗೆ ರಕ್ತ ಸಂಚಾರವನ್ನು ಹೆಚ್ಚಿಸಿ ಕೂದಲ ಬೆಳವಣಿಗೆಯನ್ನು ಹೆಚ್ಚುಸುವ ಔಷಧಿಗಳು ಹಾಗೂ ಶಾಂಪೂಗಳು ಲಭ್ಯವಿವೆ. ಆದರೆ ಕೂದಲುದುರಲು ಏನಾದರು ಬೇರೆ ಕಾರಣವಿದ್ದರೆ ಈ ಔಷಧಿಗಳು ಪರಿಣಾಮ ಬೀರದೇ ಇರಬಹುದು ಅಥವಾ ಅದು ತಾತ್ಕಾಲಿಕವಾಗಿರಬಹುದು. ಹೊಸ ಕೂದಲು ಬೆಳೆಯಲು ಮೂರು ತಿಂಗಳು ತೆಗೆದುಕೊಳ್ಳುವುದರಿಂದ ಯಾವುದೇ ಚಿಕಿತ್ಸೆ ಪರಿಣಾಮಕಾರಿಯಾಗಲು ಕನಿಷ್ಠ ಮೂರು ತಿಂಗಳ ಕಾಲಬೇಕು.

ಯಾವುದೇ ಚಿಕಿತ್ಸೆ ಪರಿಣಾಮಕಾರಿಯಾಗದೆ ಶಾಶ್ವತವಾಗಿ ಬೋಳುತಲೆಯವರಾದರೆ ಪ್ಲಾಸ್ಟಿಕ್ ಸರ್ಜನರನ್ನು ಸಂಪರ್ಕಿಸಿ ಕೂದಲನ್ನು ಕಸಿ ಮಾಡುವ ಚಿಕಿತ್ಸೆಯನ್ನು ಮಾಡಿಸಿಕೊಳ್ಳಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

**ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು.**

ಸಮಾಜ ಬಾಂಧವರೇ,

ದಿನಾಂಕ 26-04-2012ರ ಗುರುವಾರದಂದು ಸಂಜೆ 6-00 ಗಂಟೆಗೆ ಶ್ರೀ ಸಭಾದ ವತಿಯಿಂದ

*"ಶಂಕರ ಜಯಂತಿ"*ಯನ್ನು

ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತೇವೆ.

- **ಅಧ್ಯಕ್ಷರು ಮತ್ತು ಸರ್ವಸದಸ್ಯರು,** ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

## 'Trusted Senses'
## Exhibition of Paintings by four Mangalore Artists at Chitrakala Parishat, Bangalore



An art exhibition "Trusted Senses" by four professional artists of Mangalore origin will be hosted at Chitrakala Parishat, Bangalore. Muliya Jewels - the most trusted Jewelry House of Puttur & Kodagu is organizing this event in Bangalore from 12th -18th April 2012.The participating artists are Anil Devadiga, Jeevan A.S., Rajendra Kedige and Syed Asif Ali.

The venue of the exhibition is Gallery No. 3, Karnataka Chitrakala Parishat, Art Complex, Kumara Krupa Road, Bangalore 560 001and the display will be open to public viewing from 10:30 a.m. to 7:30 p.m. on the days of the exhibition.

Inauguration: Muliya 'Trusted Senses art exhibition will be inaugurated at 10:30 a.m. on 12th April by Sri Muliya Keshava Prasad, Chairman and Managing Director of Muliya Jewels, Bangalore. Sri Chi. Su. Krishna Setty, President, Karnataka Lalithkala Academy, Bangalore and Sri Venu Sharma, Founder & CEO, Ideanow (Brand Consulting), Bangalore will be the Guests of Honour on the occasion.

About the Exhibition: This is a one-of-its-kind event being organized in B"lore and the objective of this exhibition is to give exposure to artists of the coastal region in the state capital, where they attract wider attention & appreciation. Though this is a small beginning, the events like this will pave the way for improving the profile of our artists and enable them to gain national and international recognition.

Art lovers are requested to come & visit the place and enjoy the new paintings

Contact Numbers: • Rajendra Kedige - Mobile: 94800 14812






## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಸೋಮವಾರ: **"ಸತ್ಸಂಗದವರಿಂದ ಭಜನೆ"** ಸಂಜೆ 6-00 ಗಂಟೆಯಿಂದ

ಪ್ರತಿ ಮಂಗಳವಾರ: **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.09-05-2012) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.26-04-2012 ಚೈತ್ರ ಶುದ್ಧ ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.09-05-2012 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀ ಶಂಕರ ಜಯಂತಿ-2012

ಜ್ಞಾನಭಾರತಿ (ರಿ.), ಉಡುಪಿ ಮತ್ತು ಶ್ರೀಶಾರದಾ ಮಂಟಪ, ಉಡುಪಿ ಇವರ ಸಹಯೋಗದಲ್ಲಿ ಈ ವರ್ಷ ಶ್ರೀಶಂಕರ ಜಯಂತಿಯನ್ನು ತಾ.29-04-2012ನೇ ಭಾನುವಾರ ಆಚರಿಸಲು ನಿಶ್ಚಯಿಸಲಾಗಿದೆ. ತಾವೆಲ್ಲರೂ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ. ಅಂದಿನ ಕಾರ್ಯಕ್ರಮಗಳು ಈ ಕೆಳಗಿನಂತಿರುವುದು.

ತಾ.29-04-2012ರ ಬೆಳಿಗ್ಗೆ 10 ಗಂಟೆಯಿಂದ ವಿವಿಧ ಸ್ಪರ್ಧೆಗಳು :

1) ಶ್ರೀ ಶಂಕರಾಚಾರ್ಯ ವಿರಚಿತ ಸೌಂದರ್ಯ ಲಹರೀ ಕಂಠಪಾಠ ಸ್ಪರ್ಧೆ, ಮೂರು ವಿಭಾಗಗಳಲ್ಲಿ ಜರಗಲಿದೆ : ಅ) ಪ್ರೌಢಶಾಲಾ ಮಟ್ಟದವರಿಗೆ (ಪ್ರಥಮ ಮತ್ತು ದ್ವಿತೀಯ ಬಹುಮಾನ), ಆ) ಕಾಲೇಜು ಮಟ್ಟದವರಿಗೆ (ಪ್ರಥಮ ಮತ್ತು ದ್ವಿತೀಯ ಬಹುಮಾನ), ಇ) ಪ್ರೌಢ ಪುರುಷ ಹಾಗೂ ಮಹಿಳೆಯರಿಗೆ (ಪ್ರಥಮ ಮತ್ತು ದ್ವಿತೀಯ ಬಹುಮಾನ)

ಶ್ರೀ ಸೌಂದರ್ಯಲಹರೀಯ ಮೊದಲ 10 ಶ್ಲೋಕಗಳು. ಇವುಗಳಲ್ಲಿ ನಿರ್ದಿಷ್ಠ ಶ್ಲೋಕಗಳನ್ನು ತೀರ್ಪುದಾರರ ನಿರ್ಣಯಕ್ಕೆ ಅನುಗುಣವಾಗಿ ಹೇಳಬೇಕು.

2) ರಂಗವಲ್ಲಿ ಸ್ಪರ್ಧೆ (ಎಲ್ಲಾ ಆಸಕ್ತರಿಗಾಗಿ)-ರಂಗವಲ್ಲಿ ಹುಡಿ ಮತ್ತು ಬಣ್ಣದ ಹುಡಿ ಒದಗಿಸಲಾಗುವುದು.

ಸಂಜೆ 3-30ರಿಂದ 4 ಗಂಟೆಯ ತನಕ ಶ್ರೀ ಶಂಕರಾಚಾರ್ಯ ವಿರಚಿತ ಶ್ಲೋಕ ಹಾಡುವಿಕೆ-ಮಕ್ಕಳು ಮತ್ತು ಮಹಿಳೆಯರಿಂದ.

**ಸಭಾ ಕಾರ್ಯಕ್ರಮ (ಸಂಜೆ ಗಂಟೆ 4ರಿಂದ)**

ಅಧ್ಯಕ್ಷತೆ : **ಶ್ರೀ ಸಿ.ಎಸ್.ರಾವ್,** ಅಧ್ಯಕ್ಷರು, ಜ್ಞಾನಭಾರತಿ (ರಿ.), ಮತ್ತು ಸ್ಥಾನಿಕ ಬ್ರಾಹ್ಮಣ ಸಂಘ (ರಿ.), ಉಡುಪಿ

ಮುಖ್ಯ ಅತಿಥಿಗಳು : **ಡಾ। ಎಚ್.ವಿ.ನರಸಿಂಹ ಮೂರ್ತಿ,** ಪ್ರಾಂತೀಯ ಧರ್ಮದರ್ಶಿ ಶೃಂಗೇರಿ ಮಠ ಮತ್ತು ನಿವೃತ್ತ ಪ್ರಾಧ್ಯಾಪಕರು, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ.
*ಪ್ರವಚನ ವಿಷಯ : ಆದಿಶಂಕರಾಚಾರ್ಯರ ಜೀವನ ಮತ್ತು ಸಂದೇಶ*

ಗಂಟೆ 5-30ಕ್ಕೆ : **ಬಹುಮಾನ ವಿತರಣೆ (ಸ್ಪರ್ಧಾ ವಿಜೇತರಿಗೆ)**

ಗಂಟೆ 6-00ರಿಂದ : **ಸುಗಮ ಸಂಗೀತ**
ಕಾರ್ಯಕ್ರಮ ನಡೆಸಿಕೊಡುವವರು :
**ಶ್ರೀ ರಾಮಕೃಷ್ಣ ಕಾಟುಕುಕ್ಕೆ ಮತ್ತು ಬಳಗದವರು**


**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

# ಶ್ರೀಶಾರದಾ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ (ನಿಯಮಿತ)

ಎಲ್.ಸಂಖ್ಯೆ 31017, ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ - 576 101.

## ಪಡುಬಿದ್ರಿ ಶಾಖೆಯ ಉದ್ಘಾಟನಾ ಸಮಾರಂಭ

**ದಿನಾಂಕ : 24-04-2012 ಮಂಗಳವಾರ ಸಮಯ : ಅಪರಾಹ್ನ ಗಂಟೆ 5-00 ಸ್ಥಳ : ಪ್ರಥಮ ಮಹಡಿ, ಗೋಕುಲ ಸಂಕೀರ್ಣ, ಕಾರ್ಕಳ ರಸ್ತೆ, ಪಡುಬಿದ್ರಿ-574111.**

ಉದ್ಘಾಟನೆ : **ಶ್ರೀ ಎಮ್.ಆರ್.ವಾಸುದೇವ್,** ನಿರ್ದೇಶಕರು, ವಿಮಾನ ನಿಲ್ದಾಣ ಪ್ರಾಧಿಕಾರ, ಬಜಪೆ, ಮಂಗಳೂರು.

ಅಧ್ಯಕ್ಷತೆ : **ಶ್ರೀ ಲಾಲಾಜಿ ಆರ್.ಮೆಂಡನ್,** ಮಾನ್ಯ ಶಾಸಕರು, ಕಾಪು ಕ್ಷೇತ್ರ, ಉಡುಪಿ ಜಿಲ್ಲೆ

ಮುಖ್ಯ ಅತಿಥಿಗಳು : **ಶ್ರೀ ಎಮ್.ಕೆ. ಮೋಹನ ರಾವ್,** ನಿವೃತ್ತ ಅಧಿಕಾರಿ, ಸುಫಲ ರಾಷ್ಟ್ರೀಯ ಫರ್ಟಿಲೈಸರ್ ಲಿಮಿಟೆಡ್

**ಶ್ರೀ ಉಮೇಶ್ ಶ್ಯಾನುಭೋಗ್,** ಮ್ಹಾಲಕರು, ಮೂಕಾಂಬಿಕಾ ಟಿಂಬರ್ಸ್, ಕಿರಿಮಂಜೇಶ್ವರ, ಕುಂದಾಪುರ ತಾಲೂಕು.

**ಶ್ರೀ ರವೀಂದ್ರ ಹೆಗ್ಡೆ,** ಉದ್ಯಮಿ ಹಾಗೂ ಕರಾವಳಿ ಪ್ರಾಧಿಕಾರದ ನಿರ್ದೇಶಕರು

**ಶ್ರೀಮತಿ ಕೆ. ನಯನ,** ಸಹಕಾರಿ ಸಂಘಗಳ ಉಪನಿಬಂಧಕರು, ಉಡುಪಿ ಜಿಲ್ಲೆ

**ಶ್ರೀಮತಿ ವಿಜಯಲಕ್ಷ್ಮೀ ಆಚಾರ್ಯ,** ಗ್ರಾಮ ಪಂಚಾಯತ್ ಅಧ್ಯಕ್ಷರು, ಪಡುಬಿದ್ರಿ

*: ನಿಮಗಿದೋ ಪ್ರತ್ಪೂರ್ವಕ ಸ್ವಾಗತ :*

| | | |
|---|---|---|
| **ಯಂ.ಸದಾನಂದ ರಾವ್** | **ಶ್ರೀಮತಿ ಸುನೀತಾ** | **ಪಟ್ಟಾಭಿರಾಮ ಎನ್.ಎಸ್.** |
| ಅಧ್ಯಕ್ಷರು | ಶಾಖಾ ವ್ಯವಸ್ಥಾಪಕರು | ಕಾರ್ಯದರ್ಶಿ |

**ಆಡಳಿತ ಮಂಡಳಿ ಸದಸ್ಯರು, ಸರ್ವಸದಸ್ಯರು, ಸಿಬ್ಬಂದಿವರ್ಗ**

ಆಡಳಿತ ಮಂಡಳಿ : **ಶ್ರೀಗಳಾದ ಯಂ.ಸದಾನಂದ ರಾವ್**-ಅಧ್ಯಕ್ಷರು, **ಶ್ರೀ ಕೆ. ವೇಣುಗೋಪಾಲ ರಾವ್**-ಉಪಾಧ್ಯಕ್ಷರು

ನಿರ್ದೇಶಕರು : **ಪ್ರಫುಲ್ಲಚಂದ್ರ ರಾವ್, ಅರವಿಂದ ಕುಮಾರ್ ಯು., ಕೆ. ಮಂಜುನಾಥ ಹೆಬ್ಬಾರ್, ವೈ.ಮುರಲೀಕೃಷ್ಣ ರಾವ್, ವೈ.ಪ್ರಕಾಶ್ ಕುಮಾರ್, ಬಿ.ಕೃಷ್ಣಮೂರ್ತಿ ರಾವ್, ಗೀತಾ ಕೃಷ್ಣಕುಮಾರ್**

| ಪ್ರಧಾನ ಕಛೇರಿ : | ಶಾಖೆ : | ನೂತನ ಶಾಖೆ : |
|---|---|---|
| **ಶ್ರೀ ಭೂವರಾಹ ಸಂಕೀರ್ಣ,** | **ಶ್ರೀಕಲಾ ಸಂಕೀರ್ಣ,** | **ಮೊದಲ ಮಹಡಿ, ಗೋಕುಲ ಸಂಕೀರ್ಣ** |
| **ವಾದಿರಾಜ ರಸ್ತೆ, ಉಡುಪಿ-576101.** | **ಕುಕ್ಕಿಕಟ್ಟೆ, ಉಡುಪಿ-576101.** | **ಕಾರ್ಕಳ ರಸ್ತೆ** |
| **ದೂರವಾಣಿ : 2522408** | **ದೂರವಾಣಿ : 2592133** | **ಪಡುಬಿದ್ರಿ-574111.** |


# ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನ, ಪಡುಬಿದ್ರಿ, ಉಡುಪಿ ತಾಲೂಕು.

## ಪೂರ್ವ ಇತಿಹಾಸ

**ಶಾಂತಾಕಾರಂ ಭುಜಗ ಶಯನಂ ಪದ್ಮನಾಭಂ ಸುರೇಶಂ । ವಿಶ್ವಾಧಾರಂ ಗಗನ ಸದೃಶಂ ಮೇಘವರ್ಣಂ ಶುಭಾಂಗಮ್ ॥**
**ಲಕ್ಷ್ಮೀಕಾಂತಂ ಕಮಲ ನಯನಂ ಯೋಗಿಹೃದ್ಯಾನಗಮ್ಯಂ । ವಂದೇ ವಿಷ್ಣುಂ ಭವ ಭಯಹರಂ ಸರ್ವಲೋಕೈಕನಾಥಂ ॥**

ಕರ್ನಾಟಕದ ಕರಾವಳಿಯ ಕಣ್ಣುಗಳೆಂದರೆ ಮಂಗಳೂರು ಮತ್ತು ಉಡುಪಿ. ಇದರ ಸಂಪರ್ಕದ ಸೇತು ರಾಷ್ಟ್ರೀಯ ಹೆದ್ದಾರಿಯ ಮಧ್ಯದಲ್ಲಿರುವಂತಹ ಪಡುಬಿದ್ರಿ . ಇಲ್ಲಿಂದ ಕಾರ್ಕಳ ರಸ್ತೆಯಲ್ಲಿ ಸುಮಾರು ೨ ಕಿ. ಮೀ. ದೂರದಲಿರುವ ರಮ್ಯವಾದ ಬಯಲುಪ್ರದೇಶ, ಎಲ್ಲೂ ನೋಡಿದರಲ್ಲಿ ಹಸಿರು ಪೈರು, ಪಕ್ಷಿಗಳು, ನವಿಲುಗಳು. ಇದರ ಮಧ್ಯದಲ್ಲಿ ಅವಿವಾಹಿತರಿಗೆ ಕಂಕಣ ಭಾಗ್ಯವನ್ನೂ, ಸಂತಾನವಿಲ್ಲದವರಿಗೆ ಸಂತಾನ ಭಾಗ್ಯವನ್ನೂ ಕರುಣಿಸುವ, ಭಕ್ತರ ಇಷ್ಟಾರ್ಥವನ್ನೂ ನೆರವೇರಿಸುವ ಶ್ರೀ ವಿಷ್ಣುಮೂರ್ತಿ ದೇವರು ಸರಿಸುಮಾರು ೭೦೦ ವರ್ಷಗಳಿಂದ ವಿರಾಜಮಾನನಾಗಿ ನೆಲೆನಿಂತಿದ್ದಾನೆ.

ಪಾದೆಬೆಟ್ಟು ವಿಷ್ಣುಮೂರ್ತಿ ದೇವರು ೭೦೦ ವರ್ಷಗಳಿಂದ ಪಾದೆಬೆಟ್ಟು ಶರ್ಮಾ ಮನೆತನದಿಂದ ಪೂಜಿಸಲ್ಪಡುತ್ತಿದ್ದು ಕುಟುಂಬಿಕರು ಹಾಗೂ ಊರವರ ಸಹಕಾರದಿಂದ ಜಾತ್ರಾ ಮಹೋತ್ಸವ ನಡೆಯುತ್ತಿತ್ತು. ಪೂರ್ವ ಇತಿಹಾಸದಂತೆ ಈ ಮನೆತನದವರು ಪಾದೆಬೆಟ್ಟು ಗ್ರಾಮದಲ್ಲಿ ಶ್ರೀ ಸುಬ್ರಹ್ಮಣ್ಯ ದೇವರನ್ನು ಪ್ರತಿಷ್ಠಾಪಿಸಿದರು. ಕೆಲವು ಸಮಯದ ನಂತರ ಕಾರಣಾಂತರಗಳಿಂದ ಈ ದೇವಸ್ಥಾನದ ಪೂಜೆ ಹಾಗೂ ಆಡಳಿತವು ಬೇರೆಯವರ ಕೈ ಸೇರಿ ಈಗ ಗ್ರಾಮ ದೇವರಾಗಿ ಪ್ರಸಿದ್ಧಿ ಪಡೆದಿದೆ. ಶ್ರೀ ವಿಷ್ಣುಮೂರ್ತಿ ದೇವರ ದೇವಸ್ಥಾನವು ಶರ್ಮಾ ಕುಟುಂಬದವರ ಆಡಳಿತದಲ್ಲಿದ್ದು ಪೇಟೆಯಿಂದ ದೂರವಿದ್ದು ಸರಿಯಾದ ಸಂಪರ್ಕ ರಸ್ತೆ ಹಾಗೂ ಆರ್ಥಿಕ ವ್ಯವಸ್ಥೆಯ ಕೊರತೆಯಿಂದಾಗಿ ಶಿಥಿಲವಾಗಿ ಭಕ್ತರ ಸಂಪರ್ಕದಿಂದ ದೂರವುಳಿದಿತ್ತು. ನಮಗೆ ತಿಳಿದಂತೆ ದಿ। ರಾಮ ಶರ್ಮರ ಕಾಲದಲ್ಲಿ ಪೂಜೆ ಪುನಸ್ಕಾರಗಳು ನಡೆಯುತ್ತಿದ್ದು, ಕೆಲವು ವಿಶೇಷ ಸಮಾರಂಭಗಳು ದೇವಸ್ಥಾನದಲ್ಲಿ ನಡೆಯುತ್ತಿದ್ದವು. ಹಲವು ದಶಕಗಳ ಹಿಂದೆ ದೇವಸ್ಥಾನದ ಗರ್ಭಗುಡಿಗೆ ಹಂಚಿನ ಮೇಲ್ಛಾವಣಿಯ ಗರ್ಭಗುಡಿ, ತೀರ್ಥಮಂಟಪ ಹಾಗೂ ಸುತ್ತು ಪೌಳಿ ನಿರ್ಮಿಸಿ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕರ ಮಾರ್ಗದರ್ಶನದಲ್ಲಿ ಬ್ರಹ್ಮಕಲಶ ನಡೆದಿದ್ದು, ತದನಂತರ ದ್ವಿವೇದಿ ಪಾವಂಜೆ ಸೀತಾರಾಮ ಶಾಸ್ತ್ರಿಗಳ ಮುಂದಾಳುತ್ವದಲ್ಲಿ ಜಾತ್ರಾ ಮಹೋತ್ಸವವು ನಡೆಯುತ್ತಿತ್ತು. ನಂತರದ ದಿನಗಳಲ್ಲಿ ದೇವಳದ ಗರ್ಭಗುಡಿ ತೀರ್ಥಮಂಟಪ ಹಾಗೂ ಸುತ್ತು ಪೌಳಿ ಶಿಥಿಲಾವಸ್ಥೆಯಲ್ಲಿದ್ದುದನ್ನು ಕಂಡು ಪಾದೆಬೆಟ್ಟು ಕುಟುಂಬಸ್ಥರು ಹಾಗೂ ಊರವರ ಸಹಾಯದಿಂದ ಸುಂದರವಾದ ಶಿಲಾಮಯ ಗರ್ಭಗುಡಿ ಹಾಗೂ ತೀರ್ಥಮಂಟಪಗಳನ್ನು ೨೦೦೧ನೇ ಇಸವಿಯಲ್ಲಿ ರಚಿಸಿ ಶ್ರೀಯುತ ಕೆ. ಸೋಮಶೇಖರರಾಯರ ಮೇಲ್ವಿಚಾರಣೆ ಮತ್ತು ಬ್ರಹ್ಮಶ್ರೀ ವಾಗೀಶ ಶಾಸ್ತ್ರೀ ಹಾಗೂ ಅವರ ಗುರುಗಳಾದ ದಿ॥ವಾಸುದೇವ ಸೋಮಯಾಜಿ ಅವರ ಮಾರ್ಗದರ್ಶನದಲ್ಲಿ ಶ್ರೀ ವಿಷ್ಣುಮೂರ್ತಿ ದೇವರ ಬ್ರಹ್ಮಕಲಶಾಭಿಷೇಕ ನೆರವೇರಿಸಿದ್ದರು.

ಅದೇ ದೇವಳಕ್ಕೆ ಸಂಬಂಧಪಟ್ಟ ಕೊಡುಗೈ ದಾನಿಗಳಾದ ಗೋರೆಗಾವ್ ಸುಬ್ರಾಯರ ಕೇಳಿಕೆಯ ಮೇರೆಗೆ ಸ್ಥಾನಿಕ ಸಮಾಜದ ಹಾಗೂ ದೇವಳಗಳ ಚಿಂತಕರಾಗಿ ಪಾದರಸದಂತೆ ಓಡಾಡುವ ಶ್ರೀ ಕರುಣಾಕರ ರಾವ್ ಬೆಳ್ಳೆಯವರು ಶೃಂಗೇರಿ ಶ್ರೀ ಜಗದ್ಗುರುಗಳ ಆಶೀರ್ವಾದದೊಂದಿಗೆ ವಿಶ್ವಸ್ಥ ಮಂಡಳಿಯನ್ನು ರಚಿಸಿರುತ್ತಾರೆ. ಶ್ರೀ ದೇವರ ಸುತ್ತು ಪೌಳಿ ನಿರ್ಮಾಣದ ಹಾಗೂ ಇನ್ನಿತರ ವ್ಯವಸ್ಥೆಗೆ ಬೇಕಾಗುವ ಸ್ಥಳವನ್ನು ಶರ್ಮಾ ಮನೆತನದವರು ದೇವಳದ ವಿಶ್ವಸ್ಥ ಮಂಡಳಿಗೆ ನೀಡಿರುತ್ತಾರೆ. ಪೌಳಿ ಹಾಗೂ ಇತರ ನಿರ್ಮಾಣದ ಕಾರ್ಯಗಳನ್ನು ಸುಮಾರು ೩೫ ಲಕ್ಷ ರೂಪಾಯಿ ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದು ಈಗ ಪೂರ್ಣಗೊಳ್ಳುವ ಹಂತದಲ್ಲಿದೆ. ಭಕ್ತ ಜನರ ಸಹಕಾರದಿಂದ ಹಾಗೂ ಸಂಘ ಸಂಸ್ಥೆಗಳ ಸಹಾಯದಿಂದ ಶ್ರೀ ಕ್ಷೇತ್ರದ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಇದೇ ಏಪ್ರಿಲ್ ೨೧ರಿಂದ ೨೬ರವರೆಗೆ ಬ್ರಹ್ಮ ಕುಂಭಾಭಿಷೇಕವು ನೆರವೇರಲಿರುವುದು. ದೇವಳದಲ್ಲಿ ನಡೆದ ಅಷ್ಟಮಂಗಲ ಪ್ರಶ್ನೆಯ ಪ್ರಕಾರ ದೇವಳದಲ್ಲಿ ವಿಷ್ಣುಮೂರ್ತಿ ದೇವರು ಪ್ರಧಾನ ದೇವರೆಂದೂ ಹಾಗೂ ಗಣಪತಿ ಹಾಗೂ ಶಾಸ್ತಾವು ಪರಿವಾರ ದೇವತೆಗಳಾಗಿರುವರು. ಅಂತೆಯೇ ಎಪ್ರಿಲ್ ೨೪ ರಂದು ಸುತ್ತು ಪೌಳಿಯ ಪ್ರತ್ಯೇಕ ಗುಡಿಗಳಲ್ಲಿ ನೂತನ ಗಣಪತಿ ಬಿಂಬ ಹಾಗೂ ಶಾಸ್ತಾವು ದೇವರ ಪ್ರತಿಷ್ಠೆ ನೆರವೇರಲಿದೆ. ಈ ದೇವಳದ ಎಲ್ಲಾ ಪುಣ್ಯ ಕಾರ್ಯಗಳಿಗೆ ಭಕ್ತಾಭಿಮಾನಿಗಳೆಲ್ಲರೂ ಭಾಗವಹಿಸಿ ಎಪ್ರಿಲ್ ೨೧ರಂದು ಸಂಜೆ ಗಂಟೆ ೪ಕ್ಕೆ ನಡೆಯುವ ಹೊರೆ ಕಾಣಿಕೆಯ ಮೆರವಣಿಗೆಯಲ್ಲಿಯೂ ಭಾಗವಹಿಸಿ ತನು-ಮನ-ಧನಗಳಿಂದ ಸಹಕರಿಸಿ ಶ್ರೀ ದೇವರ ಸಿರಿಮುಡಿ ಪ್ರಸಾದವನ್ನು ಸ್ವೀಕರಿಸಿ ಶ್ರೀ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

M. K.D. **ರಾವ್,** ಅಧ್ಯಕ್ಷರು, ಜೀರ್ಣೋದ್ಧಾರ ಸಮಿತಿ

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Gurushree Building, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org